ಹಕ್ಕಿಯ ಹರಯ



ಡಾ॥ ಪದ್ಮಾ ಶೇಖರ್

ಗೆಳತಿ (ಡಾ) ನಿರ್ಮಲಾ ಉಷರಿಗೆ,

ಪ್ರೀತಿಯಿಂದ,

ಡಾ. ಪದ್ಮಶೇಖರ್

೮.೨.೯೨

↓

Bloosom Books

↓

Arun C Kallappanavar

01.11.24

ಹಕ್ಕಿಯು ಹರಯು

ಹಕ್ಕಿಯ ಹರಯ

ಡಾ. ಪದ್ಮಾಶೇಖರ್

ಪ್ರಕಾಶಕರು
ಪ ಲ್ಲ ವಿ ಪ್ರ ಕಾ ಶ ನ
ಕೆ. ಆರ್. ರಸ್ತೆ, ಮಂಡ್ಯ

HAKKIYA HARAYA—collection of poems by Dr. Padmashekhar, Lecturer, M. F. G. College, Hunsur. Published by Pallavi Prakashana, K. R. Road, Subhashnagar, Mandya.

First Edition 1989. pp. xx+74

ಬೆಲೆ : ಹದಿನೈದು ರೂಪಾಯಿ

ಮುದ್ರಕರು :

ಶ್ರೀ ಮೀರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು–೧.

–ಗೆ

'ಹಕ್ಕಿಯು ಹರಯ'ಕೆ
ರೆಕ್ಕೆಯ ತ್ರಾಣ
ವಿಹಂಗಮ ನೋಟಕೆ
ಭಾವದ ಕಣ್ಣು
ಬದುಕಿನ ವ್ಯಂಗ್ಯಕೆ
ಭಾಗ್ಯದ ರೇಖೆ
ಅಭಿವ್ಯಕ್ತಿಯ ಆಟಕೆ
ಅಕ್ಕರೆಯ ಪ್ರೇರಣೆ
ಇತ್ತ
ನನ್ನವಗೆ
ಅನುರಾಗದ ಅಂಕಿತ.

ಮುನ್ನುಡಿ

'ಹಕ್ಕಿಯ ಹರಯ' ಡಾ. (ಶ್ರೀಮತಿ) ಪದ್ಮಾಶೇಖರ್ ಅವರ ಮೊದಲನೆಯ ಕವನ ಸಂಕಲನ. ಈ ಸಂಕಲನದ ಕಾವ್ಯ-ನಾಯಕಿ ವಿಮೋಚನೆ ಪಡೆದ ಪ್ರಜ್ಞಾವಂತ ಹೆಣ್ಣಾಗಿದ್ದಾಳೆ ; ಅವಳು ಮುಕ್ತವಾಗಿ ಆಲೋಚಿಸ ಬಲ್ಲವಳಾಗಿದ್ದಾಳೆ ; ತೀವ್ರವಾಗಿ ಅನುಭವಿಸಬಲ್ಲವಳಾಗಿದ್ದಾಳೆ ; ತಾನು ಬದುಕುತ್ತಿರುವ ಸಾಮಾಜಿಕ ಸನ್ನಿವೇಶಕ್ಕೆ ಪಡಿನುಡಿ ಕೊಡಬಲ್ಲವಳಾಗಿದ್ದಾಳೆ ; ಪುರುಷ ನಿರ್ಮಿತ ಸಾಮಾಜಿಕ ವ್ಯವಸ್ಥೆಯಲ್ಲಿನ ದ್ವಿಮುಖ ನೀತಿಯ ಬಗೆಗೆ ಸಹಜವಾಗಿ ಆಕೆಗೆ ಆಕ್ರೋಶವಿದೆ ; ಹಾಗೇ ಎಂಥ ಅನುಭವವನ್ನೂ ಪ್ರತಿರೋಧವಿಲ್ಲದೆ ಎದುರಿಸುವ ಮನೋಬಲ ಆಕೆಗೆ ಇದೆ ; ತನ್ನಂತರಂಗದಾಳಕ್ಕೆ ಇಳಿದು, ಅಲ್ಲಿನ ಚಲನವಲನಗಳನ್ನು, ತುಮುಲತಾಕಲಾಟಗಳನ್ನು, ಗುಹ್ಯಾತ್ ಗುಹ್ಯತರ ಅನುಭವಗಳನ್ನು ಸಾಕ್ಷೀ ಪ್ರಜ್ಞೆಯಿಂದ ಶೋಧಿಸಬಲ್ಲ ಸೂಕ್ಷ್ಮತೆಯೂ ಆಕೆಗಿದೆ.

'ಪ್ರಕೃತಿ-ಪುರುಷ', 'ಸೀತೆ', 'ನಾನು ನಾನಷ್ಟೆ', 'ನೆಲೆ'—ಈ ಕವಿತೆಗಳು ಹೆಣ್ಣಿನ ಬದುಕಿನ ಅರ್ಥದ ನೆಲೆಗಳನ್ನು ಹುಡುಕುತ್ತವೆ. ಪ್ರಕೃತಿ ಹೆಣ್ಣು, ಪುರುಷ ಗಂಡು-ಎಂಬ ತಾತ್ತ್ವಿಕ ಸಮೀಕರಣ ಇಂದಿನದಲ್ಲ. ವಿರುದ್ಧಾತ್ಮಕ (dialectical) ಸಂಬಂಧವುಳ್ಳ ಪ್ರಕೃತಿ-ಪುರುಷ ತತ್ತ್ವವೆ ನಮ್ಮ ತಾತ್ತ್ವಿಕಚಿಂತನೆಯ ಮೂಲವಾಗಿದೆ. ಪ್ರಕೃತಿ ಪ್ರಾಧಾನ್ಯವನ್ನು ಪ್ರತಿಪಾದಿಸುವ ತಾತ್ತ್ವಿಕ ಪಂಗಡಗಳಿವೆ ; ಇವುಗಳಲ್ಲಿ ಶಾಕ್ತ ತಾಂತ್ರಿಕ ಪಂಥಗಳು ಮುಖ್ಯವಾಗಿವೆ. ಪುರುಷ ಪ್ರಾಧಾನ್ಯವನ್ನು ಪ್ರತಿಪಾದಿಸುವ ತಾತ್ತ್ವಿಕ ಪಂಗಡಗಳಿವೆ. ಮೊದಲನೆಯದರಿಂದ ಸ್ತ್ರೀಪ್ರಧಾನ ಸಾಮಾಜಿಕ ವ್ಯವಸ್ಥೆ ರೂಪಗೊಂಡರೆ, ಇನ್ನೊಂದರಿಂದ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ ರೂಪುಗೊಳ್ಳುತ್ತದೆ. ಪ್ರಪಂಚದ 'ಮಹಾಧರ್ಮ'ಗಳೆಲ್ಲ ಪುರುಷ ಪ್ರಧಾನವಾದುವುಗಳಾದ್ದರಿಂದ ಅಲ್ಲೆಲ್ಲ ಗಂಡಿಗೇ ಪ್ರಥಮ ಸ್ಥಾನ. ಅವು ರೂಪಿಸಿದ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಏನಿದ್ದರೂ **second sex.** ಹೆಣ್ಣು **first sex** ಆಗಿರುವ ವ್ಯವಸ್ಥೆಗಳು ಬಹಳ ಕಡಿಮೆ. ನಮ್ಮ

ಸಾಮಾಜಿಕ ಸಂದರ್ಭದಲ್ಲಿಯೂ 'ದ್ವಿತೀಯ ಲಿಂಗ'ವಾಗಿದ್ದ ಹೆಣ್ಣು ಮೊನ್ನೆ ಮೊನ್ನೆಯವರೆಗೆ ಆರ್ಥಿಕ ಸ್ವಾತಂತ್ರ್ಯವೂ ಇಲ್ಲದವಳಾಗಿದ್ದಳು. ಇಂಥ ಸನ್ನಿವೇಶದೊಡಲಿನಿಂದಲೆ, ಆಧುನಿಕ ವಿದ್ಯಾಭ್ಯಾಸ, ಪಾಶ್ಚಾತ್ಯ ಉದಾರವಾದೀ ಧೋರಣೆಗಳ ಪ್ರಭಾವ, ಸ್ವಾತಂತ್ರ್ಯನಂತರದಲ್ಲಿ ಬದಲಾಗುತ್ತಿರುವ ಹೆಣ್ಣಿನ ಆರ್ಥಿಕ ಪರಿಸ್ಥಿತಿ, ಮುಂತಾದುವುಗಳ ಕಾರಣದಿಂದ ಆಧುನಿಕ ಸ್ತ್ರೀ ಉದ್ಭವವಾಗುತ್ತಿದ್ದಾಳೆ. ಎಂಥ ಕ್ರಾಂತಿಯಾದಾಗಲೂ ಹಿಂದಿನದೆಲ್ಲ ನಾಶವಾಗಿ ತತ್‌ಕ್ಷಣದಲ್ಲಿ ಹೊಸದು ಹುಟ್ಟಿಬಿಡುವುದಿಲ್ಲ. ಹಳೆಯುದರ ಅಂಶಗಳೂ ಉಳಿದು ಬಂದಿರುತ್ತವೆ. ಹಳೆಯ ಅರ್ಥ ಕಳೆದುಕೊಂಡ ಪೊಳ್ಳು ಮೌಲ್ಯಗಳನ್ನು ಆಧುನಿಕ ಸ್ತ್ರೀಯರೂ ಬಿಡದವರಾಗಿರುತ್ತಾರೆ. ಆದರೆ ಈ ಬದಲಾವಣೆಯ ಕಾರಣದಿಂದ ಕೆಲವರಾದರೂ ತಮ್ಮ ದಾಸ್ಯಕ್ಕೆ ಕಾರಣವಾದ ಪೊಳ್ಳು ಮೌಲ್ಯಗಳನ್ನು ಕಳಚಿಕೊಳ್ಳಲು ಸಾಧ್ಯವಾಗುತ್ತದೆ.

ಪುರುಷ : ಪ್ರಕೃತಿ ತತ್ತ್ವಗಳು ಒಂದನ್ನೊಂದು ವಿರೋಧಿಸುತ್ತವೆ ; ಮತ್ತೆ ಬಯಸುತ್ತವೆ. ನಿರೀಕ್ಷಿಸುತ್ತವೆ, ದ್ರವಿಸುತ್ತವೆ, ಒಂದಾಗುತ್ತವೆ. ಹೀಗಾದಾಗ ಒಂದರ ಸ್ವಾತಂತ್ರ್ಯವನ್ನು ಇನ್ನೊಂದು ಗೌರವಿಸಿದಾಗ, ವಿರೋಧ ಅಳಿದು ಸಾಮರಸ್ಯ ಸಾಧಿತವಾಗುತ್ತದೆ. ಹೆಣ್ಣು ಗಂಡುಗಳಲ್ಲಿ ಯಾರೂ 'ಪ್ರಥಮಲಿಂಗ'ವಲ್ಲ. ಅವರು ಸಮಾನರು. ಇದೇ ನಿಜವಾದ ಸ್ವಾತಂತ್ರ್ಯ. ಇದು ಆದರ್ಶ ಎನ್ನುವುದು ನಿಜವಾದರೂ, ಅದೇ ಸರಿಯಾದ ಗುರಿ.

'ಪ್ರಕೃತಿ–ಪುರುಷ' ಕವನ, ಹೆಣ್ಣಿನ ಸೃಜನಶೀಲತೆಯನ್ನು, ಅದಕ್ಕೆ ಕೇವಲ ಸಾಧನವಾಗಿರುವ ಗಂಡು, ನೈಸರ್ಗಿಕವಾಗಿ ತನಗಿರುವ ಕೆಲವು ಅನುಕೂಲಗಳ ಸಹಾಯದಿಂದ, ಯುಗ ಯುಗಗಳಿಂದ ದುರುಪಯೋಗ ಮಾಡುತ್ತ ಬಂದದ್ದನ್ನು ಚಿತ್ರಿಸುತ್ತದೆ.

ನಾನು ಪ್ರಕೃತಿ
ನೀನು ಪುರುಷ

ಎಂದು ಆರಂಭವಾಗುತ್ತ ವೈಯಕ್ತಿಕತೆ ಸಾರ್ವತ್ರಿಕತೆಯನ್ನು ಒಂದು ಮಾಡುವ ರೀತಿ ಇಲ್ಲಿನ ವಿಶೇಷವಾಗಿದೆ. ಪ್ರಕೃತಿ–ಪುರುಷ ತತ್ತ್ವದ

ಸಾರ್ವತ್ರಿಕದ ನೆಲೆಗೆ, 'ನಾನು' 'ನೀನು' ವೈಯಕ್ತಿಕತೆಯನ್ನು ಜೋಡಿಸುತ್ತವೆ. 'ನಾನು'ವಿನ ಸ್ವಗತಲಹರಿಯಂತೆ ಕವನ ಮುಂದುವರಿದರೂ, 'ನಾನು' 'ನೀನು' ಮುಖಾಮುಖಿಯಾಗುತ್ತವೆ. ಪ್ರಕೃತಿ–ಪುರುಷರ ವಿರುದ್ಧಾತ್ಮಕ ಸಂಬಂಧ, ಸರಳ ವಿನ್ಯಾಸದಲ್ಲಿ ರೂಪುಗೊಳ್ಳುತ್ತದೆ.

ಇತ್ತೀಚೆಗೆ ಸೀತೆ ದ್ರೌಪದಿ ಅಕ್ಕಮಹಾದೇವಿ–ಇವರನ್ನು ಕುರಿತು ಬರೆಯದ ಆಧುನಿಕ ಕನ್ನಡ ಕವಯತ್ರಿಯರು ಬಹಳ ವಿರಳ. ಭಾರತದ ಸಂಸ್ಕೃತಿಯ ಅಂಗವಾಗಿ, ಧಾರ್ಮಿಕವಾಗಿ ಸಾಮಾಜಿಕವಾಗಿ ಸ್ತ್ರೀಯ ಬದುಕನ್ನು ರೂಪಿಸುವುದಕ್ಕೆ ಕಾರಣರಾದವರು ಈ ಪೌರಾಣಿಕ ವ್ಯಕ್ತಿಗಳಾದ ಸೀತೆ ದ್ರೌಪದಿಯರು. ಇನ್ನು ಅಕ್ಕಮಹಾದೇವಿ, ಒಂದು ವಿಶಿಷ್ಟ ಸಾಮಾಜಿಕ ಸಂದರ್ಭದಲ್ಲಿ ಸಾಂಪ್ರದಾಯಿಕತೆಯನ್ನು ದಿಟ್ಟವಾಗಿ ತಿರಸ್ಕರಿಸಿ ಬಾಳಿದ ಒಬ್ಬ ಐತಿಹಾಸಿಕ ವ್ಯಕ್ತಿ.

ಸೀತೆ ಕವನ ಆರಂಭವಾಗುವ ರೀತಿ ಧ್ವನಿಪೂರ್ಣವಾಗಿದೆ :

> ಸೀತೆ
>
> ನಾನು ಸೀತೆ

ಎನ್ನುತ್ತಿದ್ದಂತೆ ಇಲ್ಲಿ ಸಂಕಲನದ ಕಾವ್ಯನಾಯಕಿ ತನ್ನನ್ನು ಸೀತೆ ಎಂದು ಕರೆದುಕೊಳ್ಳುತ್ತಿದ್ದಾಳೆ ಎನ್ನಿಸುತ್ತದೆ. ಆದರೆ ಕವನ ಮುಂದೆ ಸೀತೆಯ ಸ್ವಗತಲಹರಿಯಂತೆ ಅಥವಾ ತನ್ನೊಬ್ಬಳು ಗೆಳತಿಯನ್ನು ಕುರಿತು ಹೇಳಿಕೊಳ್ಳುತ್ತಿರುವಂತೆ ಸಾಗುತ್ತದೆ. ಈ ಗೆಳತಿ ಯಾರು ? ಆಕೆ ಈ ಸಂಕಲನದ ಕಾವ್ಯನಾಯಕಿಯೆ ಆಗಿದ್ದಾಳೆ. ಆಧುನಿಕ ಹೆಣ್ಣಾದ ಇವಳನ್ನು ಕುರಿತು ಸೀತೆ ತನ್ನ ಪಾಡನ್ನು ಹೇಳಿಕೊಳ್ಳುತ್ತಿರುವಂತೆ ಕವನದ ವಿನ್ಯಾಸವಿದೆ ; ಅಲ್ಲದೆ ಕಾವ್ಯನಾಯಕಿ ತನ್ನ ಜೀವನದ ವಿಷಮತೆಯನ್ನು ಸೀತೆಯ ಪ್ರತೀಕದಲ್ಲಿ ಕಂಡುಕೊಳ್ಳುತ್ತಿದ್ದಾಳೆ ಎಂದೂ ಎನ್ನಿಸುತ್ತದೆ. ಸೀತೆಯ ಅಂತರಂಗದಲ್ಲಿ ಆಗಿರಬಹುದಾದ ಅಥವಾ ಸಂಕಲನದ ನಾಯಕಿ ಸೀತೆಯ ಸ್ಥಾನದಲ್ಲಿ ನಿಂತು ಅನುಭವಿಸಿದ ಅಂತರಂಗದ ಕೋಲಾಹಲವನ್ನು ಈ ಕವನ ಸೂಕ್ಷ್ಮವಾಗಿ ಅಭಿವ್ಯಕ್ತಿಸುತ್ತದೆ.

> ಕೊನೆಗೂ ದಕ್ಕಲಿಲ್ಲ ನನಗೆ
>
> ಮನ ಬಯಸಿದ್ದ ರಾಮ

ಕವನದ ಈ ಪಾದಗಳು ಶ್ರೇಷ್ಠಕಾವ್ಯದ ಮಾನದಂಡಗಳಾಗಿವೆ ; ಸಾಂದರ್ಭಿಕ ಔಚಿತ್ಯದಿಂದ ಅವು ಪಡೆದುಕೊಳ್ಳುವ ಧ್ವನಿರಮ್ಯತೆ ಅನನ್ಯವಾದದ್ದು. ಲಯವೇ ಅರ್ಥಭಾವವಾಗುವ ಇಂಥ ಬರವಣಿಗೆ ನನಗೆ ಬಹಳ ಪ್ರಿಯ. ಈ ಕವನ ಸೀತೆಯನ್ನು ಕುರಿತು ಕನ್ನಡದಲ್ಲಿ ಬಂದಿರುವ ಕವನಗಳಲ್ಲಿ ಶ್ರೇಷ್ಠ ವಾದದ್ದಾಗಿದೆ.

'ನಾನು ನಾನಷ್ಟೆ' ಕವನದಲ್ಲಿ ಅರ್ಥ ವಾಚ್ಯವಾಗಿ ಆರ್ಭಟಿಸುತ್ತದೆ; ಕಲಾತ್ಮಕತೆಯ ದೃಷ್ಟಿಯಿಂದ ಇದು ಅಷ್ಟು ಉತ್ತಮ ಕವನವಲ್ಲ. ಆದರೆ ಇಲ್ಲಿರುವ ನಿಲುವು ಧೈರ್ಯದ್ದು ; ಬಹಳ ಅನ್ಯಕವಯತ್ರಿಯರಿಗೆ ಸಾಧ್ಯ ವಿಲ್ಲದ್ದು. ಗುಂಡು ಹೊಡೆದಂತೆ ಈ ಕವನ ಗಂಡಿನ (ಗಂಡನ) 'ಲಿಂಗ ಪ್ರತಿಷ್ಠೆಗೆ' ಸವಾಲು ಹಾಕುತ್ತದೆ. ಗಂಡಿನಿಂದ ಪ್ರತ್ಯೇಕವಾದ ಒಂದು ವ್ಯಕ್ತಿತ್ವ ತನಗೂ ಇದೆ ಎಂಬುದನ್ನು ಢಾಳವಾಗಿ ಘೋಷಿಸುತ್ತದೆ ; ಸಾಂಪ್ರ ದಾಯಿಕ ಸತೀತ್ವದ ಪೊಳ್ಳುತನವನ್ನು ತಿರಸ್ಕರಿಸುತ್ತದೆ :

......
ನೀನೇನು ಪಾಂಡುವಲ್ಲ
ಪತಿಯ ಹೆಸರಿನಲ್ಲಿ
ನಿಯೋಗಕ್ಕೀಡಾದ
ಮಹಾಸತಿ ಕುಂತಿ ನಾನಲ್ಲ
ಇಬ್ಬರಿಗೂ ಸಮಪಾಲು
ಸಮ ಬಾಳ್ವೆ
ಸಮಾನಧರ್ಮ ನೇಮ ನಿಯಮ
ಪಾಪಕರ್ಮ ಎಲ್ಲ
......
ಗಂಡೆ ನಾ ಬಲ್ಲೆ ನಿನ್ನ ಅಂತರ್ಯವ
ನಿನಗೆ ಬೇಕಿರುವುದೇನೆಂದು ?
......
ಮೊಸಲಳಿಯದ ಅಕ್ಷತಕನ್ಯೆ
ಪರಮ ಪತಿವ್ರತೆಯ ವ್ರತನಿಷ್ಠೆ

ಸೀತೆ ಸಾವಿತ್ರಿಯರ ನೆರಳ
ಪಾತಿವ್ರತ್ಯದ ತಕ್ಕಡಿಯಲ್ಲಿ
ನನ್ನನ್ನಿಟ್ಟು ತೂಗಿ ತೂಗಿ
ಇಲ್ಲದ ಎತ್ತರಕ್ಕೇರಿಸಬೇಡ
....
ನಿತ್ಯ ಕಾಡುವ
ಶಂಕಿತ ನೋಟಕ್ಕೆ
ನಾನು ಬೆಚ್ಚಿ ಬೀಳುವುದಿಲ್ಲ
......
ಆದ್ದರಿಂದ
ನೂರುನಾಲಿಗೆಗೆ
ವಸ್ತುವಾಗಿಸದೆ
ನನ್ನಷ್ಟಕ್ಕೆ ನನ್ನ ಬಿಟ್ಟು ಬಿಡು

ಈ ನಿಲುವನ್ನು ಇಷ್ಟು ದಿಟ್ಟವಾಗಿ ಸ್ಪಷ್ಟವಾಗಿ ಹೇಳುವ ಇನ್ನೊಂದು ಕನ್ನಡ ಕವನವನ್ನು ನಾನು ಓದಿಲ್ಲ. ಮೌಲ್ಯದ ಹೆಸರಿನಲ್ಲಿ ಈ ಸತೀತ್ವ ಸ್ತ್ರೀಗೆ ಚಿನ್ನದ ಸಂಕೋಲೆಯಾಗಿರುವುದನ್ನು ಅರಿತ ಕಾವ್ಯನಾಯಕಿ ಅದನ್ನು ದಿಟ್ಟತನದಿಂದ ತಿರಸ್ಕರಿಸಿ ಬಿಡುತ್ತಾಳೆ.

'ನೆಲೆ' ಎಂಬ ಚಿಕ್ಕ ಕವನ, 'ಭೂತ'ದ ಭಾರದಿಂದ ಭವಿಷ್ಯದ ಆಸೆಯಿಂದ 'ವರ್ತಮಾನ'ದಲ್ಲಿ ನೆಲೆಯಿಲ್ಲದ ಅವಸ್ಥೆಯನ್ನು ಹೇಳುತ್ತದೆ ; ವರ್ತಮಾನದಲ್ಲಿ ಅಸ್ತಿತ್ವಕ್ಕೆ ಅರ್ಥ ಕಂಡುಕೊಳ್ಳಬೇಕಾದ ಅವಶ್ಯಕತೆಯನ್ನು ಕುರಿತು ಹೇಳುತ್ತದೆ. 'ವ್ಯವಸ್ಥೆ' ಪಟ್ಟಭದ್ರರಿಗೆ 'ಫಲವತ್ತಾದ ಹಸಿರು ಭೂಮಿ' ಬಡವರಿಗೆ 'ಬರಡು ಭೂಮಿ' —ಇದು 'ವ್ಯವಸ್ಥೆ' ಕವನದ ವಸ್ತುವಾಗಿದೆ. 'ಊಸರವಳ್ಳಿಗಳು' ಎಂಬ ಕವನ, ಸಮಾಜದಲ್ಲಿನ ಬಹಳ ಮಂದಿಯ ಗೋಸುಂಬೆತನವನ್ನು ವಿಡಂಬಿಸುತ್ತದೆ. 'ಹುಡುಕಿ ಕೊಡಿ' ಕವನ ನವುರಾದ ಭಾವಗಳನ್ನು ಅಂಥದೇ ಭಾಷೆಯಲ್ಲಿ ವ್ಯಕ್ತಪಡಿಸುತ್ತದೆ. ಈ ಸಂಕಲನದ ನಾಯಕಿಗೆ ಕೌಟುಂಬಿಕ ಭಾವನೆಗಳೂ ಇವೆ. 'ನನ್ನ ಪೋರ' ಇದಕ್ಕೆ ಉದಾಹರಣೆಯಾಗಿದೆ ; ಅಲ್ಲಿ ವಾತ್ಸಲ್ಯಭಾವ ತಕ್ಕ ಭಾಷೆ

ಯಲ್ಲಿ ವ್ಯಕ್ತವಾಗುತ್ತದೆ. ಅಲ್ಲದೆ 'ಗೆಳೆತನ', 'ಅಭಿಸಾರಿಕೆ', ಬೇಗುದಿ', 'ಎಲೆ ಹುಡುಗ' ಮುಂತಾದ ಸುಂದರ ಕವನಗಳು ಈ ಸಂಕಲನದಲ್ಲಿವೆ.

ಒಬ್ಬಳು ಬುದ್ಧಿವಂತ ಸಂವೇದನಾಶೀಲ ಕಾವ್ಯನಾಯಕಿಯನ್ನು ಸೃಷ್ಟಿ ಮಾಡಿರುವುದಕ್ಕಾಗಿ, ಅಲ್ಲದೆ ಪ್ರಥಮ ಕವನ ಸಂಕಲನದಲ್ಲಿಯೆ ಭಾಷಾ ಪ್ರಯೋಗದಲ್ಲಿ ಮತ್ತು ಅಭಿವ್ಯಕ್ತಿಯಲ್ಲಿ ಪರಿಣತಿಯನ್ನು ಸಾಧಿಸಿರುವುದಕ್ಕಾಗಿ, ಶ್ರೀಮತಿ ಪದ್ಮಾಶೇಖರ್‌ರವರನ್ನು ನಾನು ಅಭಿನಂದಿಸುತ್ತೇನೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು–6

ಪ್ರೊ. ಎಚ್. ಎಂ. ಚನ್ನಯ್ಯ

ಕಾವ್ಯ ಪ್ರವೇಶಕ್ಕೆ ಮುನ್ನ

ಕವನ ಬರೆಯುವುದು ನನಗೆ ಹೊಸತೇನೂ ಅಲ್ಲ. ಪ್ರೌಢಶಾಲಾ ಹಂತದಲ್ಲಿಯೇ 'ಮಲ್ಲಿಗೆ' ಕಾವ್ಯಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದೆ. ಕನ್ನಡದಲ್ಲಿ ನನಗಿದ್ದ ಒಲವನ್ನು ಗ್ರಹಿಸಿ ಮೊಳಕೆಯಲ್ಲಿಯೇ ರಸಗೊಬ್ಬರದ ಆಸರೆ ಇತ್ತವರು ಆಗ ನನ್ನ ಕನ್ನಡ ಅಧ್ಯಾಪಕರಾಗಿದ್ದ ಕೆ. ಸಚ್ಚಿದಾನಂದಯ್ಯ (ಚಿರಂತನ) ಮತ್ತು ಶ್ರೀನಿವಾಸ ಅಡಿಗರು. ಅವರಿಬ್ಬರ ಒತ್ತಾಸೆಯ ಫಲವಾಗಿ ಕನ್ನಡವನ್ನು ಐಚ್ಛಿಕವಾಗಿ ಅಭ್ಯಾಸ ಮಾಡಿದೆ. ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದಾಗ, ಎಸ್. ಎಲ್. ಭೈರಪ್ಪನವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿಯೊಂದು ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ನಡೆಯಿತು. ಅದರಲ್ಲಿ ನಾನು ವಾಚಿಸಿದ 'ಬಾಳು' ಕವನಕ್ಕೆ ವಿಶೇಷ ಪ್ರಶಂಸೆ ದೊರೆಯಿತು. ಆ ಕವನ ನನ್ನ ಕಾಲೇಜಿನ ವಾರ್ಷಿಕ ಸಂಚಿಕೆಯಲ್ಲೂ ಪ್ರಕಟಗೊಂಡಿತು. ಆಗ ಕನ್ನಡ ವಿಷಯಕ್ಕೆ ಗುರುಗಳಾಗಿದ್ದ ಕೆ. ನಾಗೇಂದ್ರಪ್ಪನವರು ಹೆಮ್ಮೆಪಡುತ್ತಾ ನನ್ನನ್ನು ಈ ದಿಕ್ಕಿನಲ್ಲಿ ಬೆಳೆಯಲು ಹುರಿದುಂಬಿಸಿದರು. ಮುಂದೆ ನಿತ್ಯದ ಓದಿಗೆ ಹೆಚ್ಚು ಗಮನಹರಿಸಬೇಕಾಗಿ ಬಂದದ್ದರಿಂದ ನನ್ನ ಸಾಹಿತ್ಯಿಕ ಚಟುವಟಿಕೆ ಕೊಂಚಕಾಲ ಸ್ಥಗಿತಗೊಂಡಿತೆಂದೇ ಹೇಳಬೇಕು. ಆದರೂ ಚಿತ್ತಾಪಹಾರಿ ಸನ್ನಿವೇಶಗಳಿಗೆ ಕವನ ರೂಪ ಕೊಡುವ ಕೆಲಸ ಮಂದಗತಿಯಲ್ಲಿ ಸಾಗಿಯೇ ಇತ್ತು. ಕನ್ನಡ ಅಧ್ಯಯನ ಸಂಸ್ಥೆಯು ಜೀವನ ಸಾಹಿತ್ಯಿಕ ಬದುಕಿಗೆ ಬೇಕಾದ ಎಲ್ಲ ದಷ್ಟ ಪುಷ್ಟಿಯನ್ನು ಒದಗಿಸಿತು. ಕನ್ನಡ ಎಂ. ಎ. ವಿದ್ಯಾರ್ಥಿನಿಯಾಗಿ ಈ ಕನ್ನಡ ದೇಗುಲವನ್ನು ಸೇರಿದ ನಾನು, ಅಲ್ಲಿನ ಮಹೋಪಾಧ್ಯಾಯರ ಮಹಿಮೆಯಿಂದ ಮೇಲಾಗಿ ನನಗೆ ಪಾಠ ಹೇಳುವ ಗುರುಗಳಾಗಿ ದೊರೆತ ಹಾ. ಮಾ. ನಾಯಕ ಅವರ ನಿಕಟ ಒತ್ತಾಸೆಯಿಂದ ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಅವರ ಮಾರ್ಗದರ್ಶನದಿಂದ ಸಂಶೋಧಕಿಯಾಗಿ, ಲೇಖಕಿಯಾಗಿ ರೂಪುಗೊಂಡೆ. ನಾನು ಮೆಚ್ಚಿ ಮದುವೆಯಾದ ಡಾ. ಸೋಮಶೇಖರಗೌಡ ಅವರ ನಿರಂತರ ಪ್ರೋತ್ಸಾಹ ಹಾಗೂ

ನಿರ್ಮಾತ್ಸರ್ಯ ಕಾಳಜಿ ಮುಂದಿನ ನನ್ನ ಎಲ್ಲ ಸಾಹಿತ್ಯಿಕ ಬೆಳವಣಿಗೆಗೆ ಇಂಬು ಕೊಟ್ಟಿತು. ಒಂದೆರಡು ಕೃತಿಗಳು ಪ್ರಕಟಗೊಂಡವು. ಹತ್ತಾರು ಲೇಖನಗಳು ಹೊರಬಂದವು. ಆದರೆ ಈವರೆಗೆ ಕವನ ಸಂಕಲನ ಹೊರತರುವ ಸಾಹಸಕ್ಕೆ ಕೈಹಾಕಿರಲಿಲ್ಲ. ಏಕೆಂದರೆ ವಸ್ತುಸ್ಥಿತಿಯ ಬಗೆಗೆ ನನಗಿದ್ದ ಭಯ, ನನ್ನ ಕವನಗಳ ಗುಣಮಟ್ಟದ ಬಗ್ಗೆ ನನಗಿದ್ದ ಅನುಮಾನ, ಆತಂಕ. ಹೀಗಾಗಿ 1968 ರಷ್ಟು ಹಳೆಯದಾದ ನನ್ನ ಕಾವ್ಯ ಚೇತನ ನನ್ನ ಸಹಜ ಸಂಕೋಚಕ್ಕೆ ಸಿಲುಕಿ ನಲುಗುತ್ತಿತ್ತು.

"They also serve who only stand and wait" ಕವಿ ಮಿಲ್ಟನನ ಮಾತು ನಿಜ. ಕಾಯ್ದ ತಪಸ್ಸಿಗೆ ಫಲ ದೊರೆಯಿತು. ನಾಡಿನ ಪ್ರಖ್ಯಾತ ಕವಿ ಡಾ. ನಿಸ್ಸಾರ್ ಅಹಮದ್ ನನ್ನ ಡೈರಿಯ ಕವನಗಳ ಮೇಲೆ ಕಣ್ಣಾಡಿಸಿ ನನ್ನ ಆತಂಕ ನಿರಾಧಾರವಾದುದೆಂಬುದನ್ನು ತೋರಿಸಿ ಕೊಟ್ಟರು. ಅಲ್ಲದೆ ಚಿಕ್ಕನಾಯಕನ ಹಳ್ಳಿಯಲ್ಲಿ, ಬೆಂಗಳೂರು ಕುವೆಂಪು ಅಧ್ಯಯನ ಕೇಂದ್ರದ ಸಹಯೋಗದೊಡನೆ ಏರ್ಪಡಿಸಲಾಗಿದ್ದ ತೀನಂಶ್ರೀ, ಡಿಎಲ್ಎನ್ ವಿಚಾರ ಸಂಕಿರಣ ಮತ್ತು ಕವಿಗೋಷ್ಠಿಗಳಿಗೆ ನನ್ನನ್ನು ಆಹ್ವಾನಿಸಿ ಹೆಸರಾಂತ ಕವಿಗಳ ಸಾಲಿನಲ್ಲಿ ನನ್ನನ್ನು ಕೂರಿಸಿಯೇ ಬಿಟ್ಟರು. ಸಂಕೋಚ ದಿಂದಲೇ ನಾನು ಓದಿದ 'ನಗ್ನಸತ್ಯ' ಕವನ ಎಲ್ಲರ ಗಮನ ಸೆಳೆಯಿತು. ನವೋದಯ ಹರಿಕಾರ ಪುತಿನ ಅಂಥವರು ಬೆನ್ನುತಟ್ಟಿ ಹರಸಿದರು. ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ, ಪ್ರೊ. ಜಿ. ಎಸ್. ಶಿವರುದ್ರಪ್ಪ, ಪ್ರೊ. ಕಮಲಾ ಹಂಪನಾ, ಹಾಗೂ ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಶ್ರೀ ಸುಮತೀಂದ್ರನಾಡಿಗ, ಹಾಗೂ ನನ್ನ ಆತ್ಮೀಯರೂ, ಹಿತೈಷಿಗಳೂ ಆದ ಎಚ್. ಆರ್. ದಾಸೇಗೌಡ, ಹ. ಕ. ರಾಜೇಗೌಡ, ಪ್ರೊ. ಜೀಶಂಪ ಇತ್ಯಾದಿಯಾಗಿ ಎಲ್ಲರೂ ನನ್ನ ಬಗೆಗೆ ಅಭಿಮಾನದ ಮಾತುಗಳನ್ನಾಡಿದರು. ನನಗೆ ಧನ್ಯತೆಯ ಭಾವ.

ಈ ಧನ್ಯತೆಯನ್ನು ಕಾವ್ಯ ಧ್ವನಿಯಾಗಿಸುವಲ್ಲಿ ಗೆಳತಿಯರಾದ ವೈ.ಸಿ. ಭಾನುಮತಿ, ಇಂದೂಬಾಯಿ, ರತ್ನ, ಉಷಾ, ಸ. ನ. ಗಾಯತ್ರಿ ಹಾಗೂ ಅರುಣ ಅವರ ಪಾತ್ರ ಹಿರಿದು. ನಾನು ಬರೆದದ್ದನ್ನೆಲ್ಲ ಇವರೊಡನೆ ಚರ್ಚಿಸಿ ಸೂಕ್ತ ಮಾರ್ಪಾಟುಗಳನ್ನು ಮಾಡಿದ್ದೇನೆ. ಈ ನಿಟ್ಟಿನಲ್ಲಿ ಮಿತ್ರ

ರಾದ ಡಾ. ಕೆ. ಜಿ. ನಾರಾಯಣ ಪ್ರಸಾದ್ ತುಂಬ ಸಹಾಯ ಮಾಡಿದ್ದಾರೆ. ಇದೆಲ್ಲದರ ಜೊತೆಗೆ ಸ್ವತಃ ಕವಿಯಾದ ನನ್ನ ಪತಿ ಕವನಗಳ ಅರೆಕೊರೆಗಳನ್ನು ತುಂಬಿಕೊಟ್ಟಿದ್ದಾರೆ. ಅಷ್ಟೇಕೆ ಅವರ ಸಂಕಲನದ ಜೊತೆಜೊತೆಗೆ ನನ್ನ ಈ ಸಂಕಲನವೂ ನಿಮ್ಮ ಕೈಸೇರಲು ನೆರವಾಗಿದ್ದಾರೆ.

ವಿದ್ಯಾರ್ಥಿದೆಸೆಯಿಂದಲೂ ನನ್ನ ಬದುಕಿನ ಹೆಜ್ಜೆಗಳನ್ನು ಸರಿದಾರಿಯಲ್ಲಿಯೇ ಊರಲು ಬೇಕಾದ ಕಟ್ಟೆಚ್ಚರದ ಶ್ರೀರಕ್ಷೆಯನ್ನು ಅತ್ಯಂತ ಅಭಿಮಾನದಿಂದ ಒದಗಿಸಿಕೊಡುತ್ತಿರುವ ಪ್ರಾಚಾರ್ಯ ಹಾ.ಮಾ ನಾಯಕರ ಗಮನಕ್ಕೆ ತರದೆ ನನ್ನ ಯಾವ ಚಟುವಟಿಕೆಯೂ ಬೆಳಕು ಕಾಣುವುದಿಲ್ಲ. ಈ ಕವನ ಸಂಕಲನವೂ ಅಷ್ಟೆ. ಇಷ್ಟೆಲ್ಲ ಸ್ನೇಹಿತರು, ಹಿರಿಯರು ಕೊಟ್ಟ ಧೈರ್ಯದಿಂದ ಕವನಗಳ ಹಸ್ತಪ್ರತಿಯನ್ನು ಕಣ್ಣಾಡಿಸಲು ಅವರಿಗೆ ಕೊಟ್ಟೆ. ನನ್ನ ಕಾವ್ಯ ಸತ್ವದ ಬಗೆಗೆ ಮೆಚ್ಚುಗೆಯ ಮಾತುಗಳನ್ನಷ್ಟೇಅಲ್ಲ, ಈ ಕೆಲಸವನ್ನು ಇದಕ್ಕಿಂತ ಹಿಂದೆಯೇ ನಾನು ಮಾಡಬೇಕಾಗಿದ್ದ ಅಗತ್ಯವನ್ನು ಅತ್ಯಂತ ಕಳಕಳಿಯಿಂದ ಹೇಳಿದರು. ನನ್ನ ಕವನಗಳಲ್ಲಿ ಅಂತರ್ಗತವಾಗಿ ಹರಿವ ಭಾವದ ಸೆಲೆಯನ್ನು ಗ್ರಹಿಸಿ 'ಹಕ್ಕಿಯ ಹರಯ' ಎಂಬ ಅರ್ಥಪೂರ್ಣ ಹೆಸರನ್ನು ಕೊಟ್ಟವರೂ ಅವರೆ. ಮುಲಾಜಿಗಾಗಿ ಮಾತನ್ನಾಗಲಿ, ಬರವಣಿಗೆಯನ್ನಾಗಲಿ ಎಂದೂ ಅಪಮೌಲ್ಯಗೊಳಿಸದ ಇವರು ನನ್ನ ಕವನಗಳ ಬಗೆಗೆ ಬರೆದಿರುವ ಅಭಿಪ್ರಾಯ ಅತ್ಯಮೂಲ್ಯವಾದುದೆಂಬುದನ್ನು ಗೌರವದಿಂದ ಒಪ್ಪುತ್ತೇನೆ.

ಈ ಕವನ ಸಂಕಲನದ ಎಷ್ಟೋ ಕವನಗಳನ್ನು ಶೂದ್ರ ಶ್ರೀನಿವಾಸ್, ಡಾ. ನಾಗವಾರ, ಮಳಲಿ ವಸಂತಕುಮಾರ್, ಡಾ. ಮಣಿಯನ್. ಡಾ. ಎಸ್. ಪಿ. ಯೋಗಣ್ಣ, ಡಾ. ಎಚ್. ಬಿ. ರಾಜಶೇಖರ್, ಡಾ. ಡಿ.ಕೆ. ರಾಜೇಂದ್ರ ಆರ್. ರಂಗಸ್ವಾಮಿ, ಸೀ. ಗಿರಿಗೌಡ, ಶ್ರೀಧರ ಆರಾಧ್ಯ, ಸತ್ಯನಾರಾಯಣ ಗೌಡ ಮುಂತಾದವರು ಮೆಚ್ಚಿ ಮಾತನ್ನಾಡಿದ್ದಾರೆ. ಹುಣಸೂರಿನ ನನ್ನೆಲ್ಲ ಸಹೋದ್ಯೋಗಿ ಮಿತ್ರರು ಅಕ್ಕರೆಯಿಂದ ನನ್ನ ಸಾಹಿತ್ಯಿಕ ಬೆಳವಣಿಗೆಗೆ ಪ್ರಶಂಸೆಯ ಮಳೆಗರೆದಿದ್ದಾರೆ.

ಹೊಸ ಲೇಖಕರಿಗೆ ಮುನ್ನುಡಿಯ ಶ್ರೀರಕ್ಷೆ ಇರಬೇಕಾದ್ದೆ. ತಮ್ಮದಿಟ್ಟ ನಿಲವುಗಳಿಗೆ ವಿಮರ್ಶೆಯ ತೀಕ್ಷ್ಣತೆಗೆ ಪ್ರೊ. ಎಚ್. ಎಂ. ಚೆನ್ನಯ್ಯ

ನಾಡಿನಾದ್ಯಂತ ಖ್ಯಾತರು. ಅವರು ಮುನ್ನುಡಿ ಬರೆದು ಶುಭ ಹಾರೈಸಿದ್ದಾರೆ. ರಕ್ಷಾಪುಟ ಓದುಗರನ್ನು ಮೊದಲ ನೋಟಕ್ಕೆ ಸೆಳೆಯುವ ಸೂಜಿಗಲ್ಲು. ಅಂಥ ಮುಖ ಪುಟವನ್ನೂ ಮುಖ್ಯ ಪುಟವಾಗಿಸಿದವರು ಶ್ರೀ ನಾಗರಾಜಶರ್ಮ. ನಾನು ಕೊಡುವ ಎಲ್ಲ ತೊಂದರೆಗಳನ್ನು ನಗು ನಗುತ್ತ ಸ್ವೀಕರಿಸಿ ತುಂಬು ಅಂತಃಕರಣದೊಡನೆ ಸಂಕಲನವನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟವರು ಶ್ರೀ ವಿಹಾರಾ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಕೆ. ಪಿ. ಪುಟ್ಟಸ್ವಾಮಿಯವರು. ಸೋದರರಂತೆ ಮುದ್ರಣದಲ್ಲಿ ನನ್ನೆಲ್ಲ ಸಲಹೆಗಳನ್ನು ಮಾನ್ಯಮಾಡಿದವರು ಶ್ರೀ ವೆಂಕಟೇಶ್ ಮತ್ತು ವರದರಾಜು. ದಂಪತಿಗಳ ಮೊದಲ ಕವನ ಸಂಕಲನಗಳನ್ನು ಪ್ರಕಾಶಿಸಿ, ಒಂದೇ ವೇದಿಕೆಯ ಮೇಲೆ ಬಿಡುಗಡೆ ಮಾಡಿಸಿ ಕನ್ನಡ ಸಾಹಿತ್ಯದಲ್ಲೊಂದು ದಾಖಲೆಗೆ ಕಾರಣಕರ್ತರಾದವರು ಮಂಡ್ಯದ ಪಲ್ಲವಿ ಪ್ರಕಾಶನದ ಜಯಪ್ರಕಾಶಗೌಡ ಮತ್ತು ಮಿತ್ರರು. ಈ ಎಲ್ಲ ಕೆಲಸಗಳ ಹಿನ್ನೆಲೆಯಲ್ಲಿ ನಿರಂತರವಾಗಿ ನಮ್ಮೊಡನಿದ್ದವರು ಶ್ರೀ ಹ. ಕ. ರಾಜೇಗೌಡರು. ಇವರ ಋಣದ ಭಾರ ದೊಡ್ಡದು. ಇವರಿಗೆಲ್ಲ ನಾನು ಆಭಾರಿ.

ಹುಣಸೂರು
೩.೧೧.೯೪

ಪದ್ಮಾಶೇಖರ್

ಪ್ರಕಾಶಕರ ಮಾತು

ಡಾ. (ಶ್ರೀಮತಿ) ಪದ್ಮಾಶೇಖರ್ ಅವರ 'ಹಕ್ಕಿಯ ಹರಯ' ಕವನ ಸಂಕಲನವನ್ನು ನಮ್ಮ ಪ್ರಕಾಶನದಲ್ಲಿ ಹೊರ ತರುತ್ತಿರುವುದಕ್ಕೆ ಹರ್ಷಿಸು ತ್ತೇವೆ. 'ಸ್ತ್ರೀತ್ವ'ದ ವಿವಿಧ ಘಟ್ಟಗಳ ಆಳ-ಹರವುಗಳನ್ನು ಅಭಿವ್ಯಕ್ತಿಸುವಲ್ಲಿ ಯಶಸ್ವಿಯಾಗಿ, ಭೂತ—ವರ್ತಮಾನ—ಭವಿಷ್ಯತ್‌ನ ಸೇತುವನ್ನು ಯಾ ಕಂದಕಗಳನ್ನು ದಟ್ಟವಾಗಿ ಪರಿಚಯಿಸುತ್ತಾ, ಓದುಗನ ಸಂವೇದನೆಗಳನ್ನು ಕೆಣಕುವಲ್ಲಿ ಯಶಸ್ವಿಯಾದ ಈ ಕವನ ಸಂಕಲನವನ್ನು ಸಾರಸ್ವತ ಲೋಕವು ಸ್ವಾಗತಿಸುತ್ತದೆ ಎಂಬ ಭರವಸೆ ನಮ್ಮದು.

ಡಾ. ಸೋಮಶೇಖರಗೌಡ ಮತ್ತು ಡಾ. ಪದ್ಮಾಶೇಖರ್ ಈ ದಂಪತಿಗಳಿಬ್ಬರ ಕೃತಿಗಳೆರಡನ್ನೂ ನಮ್ಮ ಪ್ರಕಾಶನದಲ್ಲಿ ಹೊರ ತರುತ್ತಿರುವುದು ನಮಗೆ ಹೆಮ್ಮೆಯ ವಿಷಯ. ಈ ಅವಕಾಶ ನೀಡಿದ ದಂಪತಿಗಳಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಇನ್ನೂ ಶೈಶವಾವಸ್ಥೆಯಲ್ಲಿ ರುವ ನಮ್ಮ ಪ್ರಕಾಶನದ ಬಗ್ಗೆ ಕಾಳಜಿ ವಹಿಸುತ್ತಿರುವ ಪೂಜ್ಯ ದೇಜಗೌ ಹಾಗೂ ಕೆ. ವಿ. ಶಂಕರಗೌಡ ಅವರನ್ನು ಸ್ಮರಿಸುತ್ತೇವೆ. ಪಲ್ಲವಿ ಪ್ರಕಾಶನ ಬೆಳೆಯಲು ಸಹಕರಿಸುತ್ತಿರುವ ಶ್ರೀ ಹ. ಕ. ರಾಜೇಗೌಡರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಮೀರಾ ಪ್ರಿಂಟರ್ಸ್ ಮಾಲಿಕರಾದ ಶ್ರೀ ಕೆ. ಪಿ. ಪುಟ್ಟಸ್ವಾಮಿ ಅವರಿಗೂ ನಮ್ಮ ನಮನಗಳು.

೨೭–೧೦–೧೯೮೯

ಪಲ್ಲವಿ ಪ್ರಕಾಶನ
ಮಂಡ್ಯ

ಕವನ ಸೂಚಿ

ಸುಖದ ಯಾನ

ಮೌನ ಮುದ್ರೆಯಲಿ
ನಿನ್ನೊಳಗೆ ಅಡಗಿಸಿಕೊಳ್ಳುತ್ತ
ಗೆಡ್ಡೆಕಟ್ಟಿರುವ ನೋವ ಕರಗಿಸಿ ಬಿಡು
ಚೆಲ್ಲಿಬಿಡು ಜನಕೂ ರುಚಿಯು ನೋಡಲು
ಬದುಕ ಒಡಕು ನಾವೆಯಲಿ
ಇದೆಲ್ಲ ಸಹಜ
ಬೇಸಗೆಯ ಎಡೆಕಾಣದ ಬಿಸಿಲಲ್ಲೂ
ದಟ್ಟೈಸಿ ಮೋಡ ಧಿಮಿಕಿಡುವಂತೆ
ಹೊಂಗೆಮರ ತನ್ನ ಬಸಿರಿಂದ ತಂಪೆರಚುವಂತೆ
ಚಿಲಿಪಿಲಿಗುಟ್ಟುವ ಹಕ್ಕಿಗಳ
ಸ್ವಚ್ಛಂದ ಹಾರಾಟದಂತೆ
ಪಶ್ಚಾತ್ತಾಪದ ಶೇಷದಿಂದ
ಮುಸುಕು ತೆಗೆ
ಕ್ರಿಮಿಸಹಜ ಕ್ರಿಯೆಯ
ಶಂಖದಹುಳುವ ಬದುಕಿಂದ
ಮೌನಕ್ಕೆ ಮಾತ ತೂರಿ
ಕ್ಷಣಗಳ ದಿನಗಳಾಗಿ ಬೆಳೆಯಗೊಡು
ಇಂದಲ್ಲ ನಾಳೆ ಬಂದೀತು ಹೊಂಗಿರಣ
ಉದಯದಲ್ಲೂ ಹನಿಕೀತು ಅಮೃತ
ಸೋರಿ ಹೋದ ಸುಖದ ಬಿಂದುಗಳ
ಮತ್ತೆ ಒಟ್ಟುಗೂಡಿಸು
ನಿರ್ಮಿಸು ಸುಖದ ಯಾನ

ಏಕೆಂದರೆ,
ಬಾಳು
ಕಲ್ಲು ಮಣ್ಣು ಕಬ್ಬಿಣ
ಸಿಮೆಂಟು ಕಾಂಕ್ರೀಟಿನಿಂದ ಕಟ್ಟಿದ
ಚರ್ವಿತ ಚರ್ವಣದ ಗೂಡಲ್ಲ
ಕತ್ತಲೆಗೆ ಕನ್ನವ ಕೊರೆದು
ತೇಲುವ ಚುಕ್ಕೆಗಳ ಹಿಡಿದು
ಭಾವುಕತೆಯ ದಾಟಿ
ಭವಿಷ್ಯದ ತಂಬೂರಿಯ ಶ್ರುತಿ ಮಾಡು
ನೀನಾಗು
ಬದುಕಿಗೆ ಅತಿಥಿ.

ವ್ಯವಸ್ಥೆ

ಎಲ್ಲೋ ಹುಟ್ಟಿ ಎಲ್ಲೋ ಬೆಳೆದು
ಹಂದಿಗಳಂತೆ
ಅಲ್ಲಲ್ಲಿ ಹೊಲಸು ರಾಡಿಯು ಮಾಡಿ
ಪಾಚಿಗಟ್ಟಿಸಿ
ಪಾಚಿಯಲ್ಲಿ ಮನುಷ್ಯತ್ವ ಮಾರಿ
ಜಾತಿ ಮತ ಧರ್ಮಗಳ ಭದ್ರಬೇಲಿಯಲಿ
ಮಾನವೀಯತೆ ಸುಲಿವ
ಶ್ರೀಮಂತರಿಗಿದು
ಫಲವತ್ತಾದ ಹಸಿರುಭೂಮಿ
ಪರಂಪರೆಯ ಕೆಸರಲ್ಲಿ
ಕಲ್ಲಕಣವಾಗಿ
ತೃಣವೆನಿಸಿ
ನಿಧಾನವಾಗಿ
ಕೊರಗಿ ಕೃಶವಾಗುತ್ತ
ವಾಸ್ತವತೆಯ ಗಿರಣಿಯಲ್ಲಿ
ಮೈಮನವ ಸುಲಿಸಿಕೊಳ್ಳುತ್ತ
ಕೊಳೆತು ನಾರುವ ನೆಣದಲ್ಲಿ
ಮೂಗು ಮುಚ್ಚಿ
ಬೆನ್ನು ಬಗ್ಗಿಸಿ
ಹಗ್ಗ ಹೊಸೆದು
ಪಿಸುಗುಡುವ ಬಡವರಿಗಿದು
ಬರಡುಭೂಮಿ.

ಹೇಗೆ ನಗಲಿ ?

ಇನ್ನೆಲ್ಲಿಯ ನಗು ಗೆಳೆಯ
ನಾನು ನಕ್ಕಾಗ
ನನ್ನ ಮುಗ್ಧತೆಯ ಕೊಳ್ಳಿ ಹೊಡೆದು
ಸಮಾಜ ವಿಧಿನಿಯಮ ನಿಷೇಧಗಳಡಿಯಲ್ಲಿ
ನನ್ನ ಮನವ ಹೂತು ಬಿಟ್ಟೆ
ನಾನು ನಕ್ಕಾಗ
ನನ್ನ ಹರೆಯದ ನಗೆಯ ಮೇಲೆ
ಮುಳ್ಳಿನ ಗಿಡನೆಟ್ಟು
ಮೈತುಂಬ ಶೂಲಗಳ ಇರಿದೆ
ನಾನು ನಕ್ಕಾಗ
ನನ್ನ ನಗುವಿನ ಮೇಲೆ
ಸುರಿದು ಸೀಮೆಎಣ್ಣೆ
ಆವರಿಸಿದ ಒಡಲ ಉರಿಯಲ್ಲಿ
ಸತ್ಯದ ಚೆಲುವ ಸುಟ್ಟೆ
ನಾನು ನಕ್ಕಾಗ
ನನ್ನ ನಗೆಯ ಮೇಲೆ
ಹಾದರದ ಹೊದಿಕೆ ಹೊದಿಸಿ
ಒಬ್ಬರಿಂದೊಬ್ಬರಿಗೆ ಅಡವಿಟ್ಟು
ಚಿಗಿತ ಬಯಕೆಗಳ ಅಲ್ಲೇ ಹೊಸಕಿದೆ
ನಾನು ನಕ್ಕಾಗ
ನನ್ನ ನಗೆಯ ಮೇಲೆ
ಪೌರುಷದ ಧ್ವಜವೇರಿಸಿ
ವಿಜಯೋನ್ಮಾದದಲ್ಲಿ
ನನ್ನ ಉಸಿರ ಕಟ್ಟಿಸಿದೆ

ಈಗ
ಗೊಗ್ಗರದನಿಯಲ್ಲದೆ
ನಗೆ ಹೇಗೆ ಅರಳೀತು
ಹೇಳು ಗೆಳೆಯಾ
ಹೇಳು.

ಪ್ರಾರ್ಥನೆ

ಕಣ್ಣು ಸೆಳೆತಕ್ಕೆ
ಆಹಾರವಾಗುವ ಮುನ್ನ
ಬಯಕೆ ತುಡಿತಗಳಿಗೆ
ಪಕ್ಕಾಗುವ ಮುನ್ನ
ಮನದ ಮಂಕುತನಕೆ
ಬಲಿಯಾಗುವ ಮುನ್ನ
ಒಡಲ ಉರಿಗೆ
ಕಿಚ್ಚಾಗುವ ಮುನ್ನ
ನನ್ನನ್ನು ಉದ್ಧರಿಸಿ
ನಿನ್ನತ್ತ ನೋಡುವಂತೆ ಮಾಡಯ್ಯಾ.

ಹಕ್ಕಿಯ ಹರಯ

ಹಾರುವ ಬಾನಕ್ಕಿಗೆ
ಹರಯ ಬಂದಿತು
ಮುಗಿಲಗಲ ಬಾನೆತ್ತರ
ಮಡಿಲುಡುಪ ಬಿಚ್ಚುತ್ತ
ಸ್ವಚ್ಛಂದದಲಿ ಅನಿಸಿಕೆಗೆ
ಆಹಾರ ಹುಡುಕಹತ್ತಿತು
ಕಾಲಗರ್ಭದಲಿ ಹುದುಗಿದ
ಬೆಳಕಿನ ಚುಕ್ಕೆಗಳನು
ಹೆಕ್ಕ ತೊಡಗಿತು
ಹೆಕ್ಕಿದ್ದು ಹತ್ತಾರು, ದಕ್ಕಿದ್ದು ಒಂದು
ಸ್ವಂತದ್ದು
ಒಳಗಿನ ದನಿಯದ್ದು
ಆದಕ್ಕೆ
ಭಾವನೆಗಳ ವರ್ಣರಂಜಿತ
ಪುಕ್ಕಗಳ ಹಚ್ಚಿ
ಸೊಗಸಿಂದ ಬೀಗುವ ವೇಳೆಗೆ
ಗಾಳಿ ಮಂದವಾಗಿ
ಚಲನೆ ನಿಂತು
ಮನಸಿನ ಗರಿ ಮುದುಡಿ
ಆ ಹರಯ
ಮಾನಸಿಕ ಸಾವು ಕಂಡಿತು.

ಹೊಸ ರೇಖೆ

ತಿಂದುಬಿಡು
ರಣಹದ್ದುಗಳಂತೆ ಕುಕ್ಕಿ
ತಿನ್ನುವ ಭೂತಗಳನು
ಸತ್ತ ಮೋಟು ಮರಗಳ ಮೇಲೆ
ಹೊಲಸು ತಿನ್ನುತ್ತ
ನಗುವೀ ಗಿಣಿಗಳನು
ಮಣ್ಣುಬಸಿರಿಂದ ಮೈಕೊಡವಿ
ಜೀವ ತಳೆದು
ಹೊಸ ಹಾಡ ಹಾಡು
ನೋಡು ಸೃಷ್ಟಿ ವೈಚಿತ್ರ್ಯ
ಸುಡು ಬಿಸಿಲಲೂ ಸುಳಿವ ತಂಗಾಳಿ
ಕಾಳ್ಗಿಚ್ಚಿನೊಳಗೂ ಕಂಗೊಳಿಪ ಕಾನನ
ಬಡಬಾನಲದೊಡಲ ಕಡಲು
ಸಾವಿನ ವರ್ತುಲದೊಳಗಣ ಜೀವನ
ಕಾಲ ಎಂಥ ನೋವನ್ನೂ ಮರೆಸೀತು
ತಂದೀತು ಉತ್ಸಾಹ
ಕಾದ ಹೊಸ ರೇಖೆಗೆ
ನೀನಾಗು ಕಲೆಗಾರ.

ಆಸೆ

ಮುಚ್ಚಿ ತೆರೆಯುವ ನಿನ್ನ
ಕಣ್ಣ ರೆಪ್ಪೆಯೊಳಗೆ
ಮೆಚ್ಚಿ ಹುದುಗುವಾಸೆ
ಬಿಚ್ಚಿಕೊಳ್ಳುವ ನಿನ್ನ
ಮೈಮನದಡಿಯಲ್ಲಿ ಸಿಕ್ಕಿ
ನಕ್ಕು ನಲಿಯುವಾಸೆ
ಬೆಚ್ಚನೆ ಬಿಸಿಗೊಂಡ ನಿನ್ನ
ಯೌವನಕ್ಕೆ ಕುಪ್ಪಿ
ಕಾವು ಕೊಡುವಾಸೆ
ಈ ಎಲ್ಲ ಆಸೆಗಳ ಏರಿ
ಹಕ್ಕಿಯಂತೆ ಹಾರುವಾಸೆ.

ಆಕಾಂಕ್ಷೆ

ನಿನ್ನ ಕಣ್ಣಲ್ಲಿ ಚಿಮ್ಮುವ ಕಾರಂಜಿಗೆ
ನಾನು ಹನಿಯಾಗುವೆ
ಪುಟಿವ ನಿನ್ನ ಉತ್ಸಾಹಕ್ಕೆ
ನಾನು ಚೇತನವಾಗುವೆ
ಹಂಚಿ ಹೋಗುವ ನಿನ್ನ ಆಕಾಂಕ್ಷೆಗೆ
ನಾನು ನೆಲೆಯಾಗುವೆ
ನಾನು ಭುವಿ ನೀನು ಬಾನಾಗಿ
ಅಭೂತಪೂರ್ವ ಸೃಷ್ಟಿಕರ್ತೆಯಾಗುವೆ
ಆತ್ಮವಿಕಾಸದ ನಾವೆಗೆ ಹುಟ್ಟುಹಾಕುತ್ತ
ಎಂದಾದರೊಮ್ಮೆ ನನ್ನೂರ ಸೇರುವೆ.

ಪ್ರಕೃತಿ–ಪುರುಷ

ನಾನು ಪ್ರಕೃತಿ
ನೀನು ಪುರುಷ
ನಾನು ಚೈತನ್ಯ
ನೀನು ಅನಿವಾರ್ಯ
ನನ್ನಿಂದಲೆ ಸೃಷ್ಟಿ ಸ್ಥಿತಿ ಲಯ ಎಲ್ಲ
ನೀನು
ನನ್ನ ಬಗೆದು ಬೀಜಬಿತ್ತಿ
ನೆತ್ತರ ಕುಡಿದು
ತಳಿಯ ಮೇಲೆ ತಳಿಯ
ಋತುಕಾಲ ಭೇದವಿಲ್ಲದೆ
ಬೆಳೆಯುತ್ತಲೆ ಇದ್ದಿ
ಬೆಳೆ ತೆಗೆಯುತ್ತಲೆ ಇದ್ದಿ
ನಾನು
ಎಂದಾದರೂ ಹಿಂಸೆ ಎಂದೆನೆ
ಅಯ್ಯೋ ಎಂದೆನೆ, ಬೇಡ ಎಂದೆನೆ
ನಿನಗಾಗಿ ಮರುಕಗೊಂಡೆ ಮಾತ್ರ
ನೀನು
ವಾಮನನಂತೆ ನನ್ನನಾವರಿಸಿ
ಪಾದುಕೆ ಮಾಡಿ
ಧೂಳ ಕಣವಾಗಿ ಕಂಡೆ
ನಾನು
ಸೃಷ್ಟಿಸಿದ ಇತಿಹಾಸವ
ಕಾಲಗರ್ಭದಲಿ ಅಡಗಿಸಿ
ಮತ್ತೆ ಮನುಕುಲಕೆ ನವ ಆಯಾಮವಿತ್ತೆ

ನೀನು
ಕಬಳಿಸುತ್ತಲೇ ನನ್ನ ಮರೆತೆ
ಇಲ್ಲ ಮರೆತಂತೆ ಸೋಗುಹಾಕಿದೆ
ನಾನು
ಮುಟ್ಟಿದರೆ ಸುಡುವ ಅನುಭವದ
ಬೆಚ್ಚನೆಯ ನೋವ ಬಸಿರಲ್ಲಿ
ನಿನ್ನ ರಕ್ಷಿಸಿದೆ
ರಕ್ಷಿಸುತ್ತಲೇ ಬಂದೆ.

ಸೀತೆ

ಸೀತೆ
ನಾನು ಸೀತೆ
ಪಂಚ ಪತಿವ್ರತೆಯರಲ್ಲಿ ಪ್ರಖ್ಯಾತಳು !
ಇದಕ್ಕಾಗಿ ನಾನು ತೆತ್ತದ್ದು ದುಬಾರಿ ಬೆಲೆ ಗೆಳತಿ
ನನ್ನೀ ಗೌರವದ ಸೆರಗ ನಕ್ಕಿಗಳ ಒಳಗೆ
ಉಂಡ ಹಾಲಾಹಲ
ಕರಗಿದ ಕಾವ ಹೇಗೆ ಹೇಳಲಿ
ಕೇಳು
ಹೆಣ್ತನದ ಅಭಿಶಾಪ ಹೊತ್ತು
ರಾಮನ ಪೌರುಷಕೆ ಸಂಕೇತವಾಗಿ ನನ್ನ ಪ್ರವೇಶ
ತುಂಬಿ ನಿಂತ ಯೌವನ ಸ್ವಪ್ನಗಳು
ಮೆಟ್ಟಿಲಾಗಿ ಪೇರಿಸಿಟ್ಟ ಹಂಬಲ ಆಕಾಂಕ್ಷೆಗಳು
ದಂತ ಗೋಪುರದಲ್ಲಿ ಮುಲುಗುಟ್ಟಿದವು
ಗೋಡೆಗಳ ಪ್ರತಿಧ್ವನಿ
ರಾಚಿದ ಒಂಟಿದನಿ
ಬೆಳದಿಂಗಳು ಕಣ್ಣೀರಾಗಿ ಹರಿದದ್ದು
ಹಾವು ತಣ್ಣಗೆ ಸರಿದದ್ದು
ನೀನೆಂತು ಅರಿಯುವೆ
ಕಟುಕನನ್ನು ಅನುಸರಿಸಿದ ಕುರಿಯಂತೆ
ಆದರ್ಶದ ಬೆಳಕಿಗೆ ದಾಖಲೆಯಾಗಿ
ಸಾಗಿದ್ದೆ ನೆರಳಾಗಿ !
ನೆರಳಲ್ಲಿ
ಅರಳಿದ ಪಕಳೆಗಳು ಒಂದೊಂದಾಗಿ
ಹೇಳ ಹೆಸರಿಲ್ಲದಾಗಿ

ಚಿಗುರೊಡೆದ ಕನಸುಗಳ ಗರ್ಭಪಾತವಾಗಿತ್ತು
ಸುತ್ತಲ ತಾಪ ಹೀರುವ
ಲೋಹ ಚುಂಬನದಲ್ಲೂ
ನಿಟ್ಟುಸಿರ ಲೀಲೆ
ಭಯದ ತೆಳು ಕಂಪನದಲ್ಲಿ
ಅಶೋಕವನದ ಅನಾಮತ್ತು ಬಂಧನ
ಭಿನ್ನ ಪರಿಸರವಷ್ಟೆ
ಮರುಕಳಿಸಿದ ಏಕಾಂಗಿತನ
ತೆರೆದ ವೇದನೆಯ ಅಂಚಿನಲ್ಲಿ
ವ್ಯರ್ಥ ನಾಮಸ್ಮರಣೆ
ಹುಸಿಯಾಗಲಿಲ್ಲ ನಿರೀಕ್ಷೆ !
ಬಂದವ
ಬೆಂಕಿಗೆ ಹಾಕಿ
ನನ್ನ ಪಾತಿವ್ರತ್ಯವ ಕೊಲೆಮಾಡಿದ
ಕ್ಷಮೆಯಾ ಧರಿತ್ರಿಯಲ್ಲವೆ ನಾನು !
ಇಲ್ಲದ ಬಯಕೆಗಳ ಇರುವಂತೆ ಗಂಟುಕಟ್ಟಿ
ಪವಿತ್ರತೆಯ ಬಾಗಿನ ಹೊತ್ತು
ಸಹಜತೆಗೆ ಕೃತಕತೆಯ ಮೆರುಗು ಹೊದ್ದು ಬಂದೆ
ಮತ್ತೆ ಆದದ್ದೇನು ?
ಅಗಸನ ಮಾತಿಗೆ ಬೆಚ್ಚಿದ
ಮೂರು ಲೋಕದ ಗಂಡ
ಧರ್ಮಕೆ ಎನ್ನನು ಮಾರಿ
ತೂರಿಬಿಟ್ಟ
ನಿಜ ಹೇಳಲೇನು ಗೆಳತಿ
ಕೊನೆಗೂ ದಕ್ಕಲಿಲ್ಲ ನನಗೆ
ಮನ ಬಯಸಿದ್ದ ರಾಮ

ಕೈಗೆ ಕೈ ಮಿಲಾಯಿಸದೆ
ವಿಫಲಯಾತ್ರೆಯ ತಡೆದು
ಎಕ್ಕಸರವಾಗಿ
ಸೀತೆಯಾದೆ
ಸತ್ತು ಸುಶೀಲೆಯಾಗುಳಿದೆ.

ತಿಳಿವು

ನಿನ್ನ ಉಸಿರಲಿ
ಉಸಿರಾಗುವೆಂಬೆನೆ
ನೀನೆನ್ನ ಪತಿಯಲ್ಲ
ನಿನ್ನ ತನುವಲಿ
ತನುವಾಗುವೆಂಬೆನೆ
ನೀನೆನ್ನ ಕಾಮಿಯಲ್ಲ
ನಿನ್ನ ಮನದಲಿ
ಮನವಾಗುವೆಂಬೆನೆ
ನೀನೆನ್ನ ಪ್ರೇಮಿಯಲ್ಲ
ನಿನ್ನ ಮಾತಲಿ
ಮಾತಾಗುವೆಂಬೆನೆ
ನೀನೀಗ ಮೌನವ್ರತಿ
ಇದ ತಿಳಿದು
ನನ್ನಂತರಂಗವನಾರು ಹೊಕ್ಕು
ತಿಳಿವಹಾಡುವರಯ್ಯಾ.

ನಾನು ನಾನಷ್ಟೆ

ಓ ಗಂಡಸೆ
ಶೋಧಿಸದಿರು
ಒಳಗನ್ನು
ಪ್ರಶ್ನಿಸದಿರು
ಪ್ರಾಮಾಣಿಕತೆಯನ್ನು
ಬಗೆಯದಿರು
ನೆನಪನ್ನು
ಏಕೆಂದರೆ
ನೀನಂದುಕೊಂಡಂತೆ
ನಾನಿರಲು ಸಾಧ್ಯವೆ ?
ನೀನೇನು ಪಾಂಡುವಲ್ಲ
ಪತಿಯ ಹೆಸರಿನಲ್ಲಿ
ನಿಯೋಗಕ್ಕೀಡಾದ
ಮಹಾಸತಿ ಕುಂತಿ ನಾನಲ್ಲ
ಇಬ್ಬರಿಗೂ ಸಮಪಾಲು
ಸಮಬಾಳ್ವೆ
ಸಮಾನ ಧರ್ಮ ನೇಮ ನಿಯಮ
ಪಾಪಕರ್ಮ ಎಲ್ಲ
ನಾನೇನು ದ್ವಾಪರ ಕೃತಯುಗದ ಹೆಣ್ಣೆ ?
ನೈಜ ಭಾವನೆಗಳ ಹೊಸಕಿ
ಉಸಿರಿನ ಸಾತವನ್ನೆ
ಮತ್ತೆ ಮತ್ತೆ ಕುಡಿಯಲು
ಕೊಳೆತ ಹಣ್ಣನ್ನೇ ಪ್ರಸಾದವೆಂದು ಸವಿಯಲು
ಉಪ್ಪು ಹುಳಿ ಖಾರ ತಿಂದು

ಹಕ್ಕಿಯ ಹರಯ / ಹದಿನೇಳು

ರುಚಿಕಟ್ಟಿದ
ಮೈಕಟ್ಟಿನ ದೇಹವಿದು
ಪ್ರೀತಿಗೆ ಸ್ಪಂದಿಸುವ
ಕಾಮನೆಗೆ ಕರಗುವ
ಹೃದಯವಿದು
ಕ್ರಿಯೆಗೆ ಪ್ರತಿಕ್ರಿಯಿಸುವ
ಹಾಸು ಇದು
ಗಂಡೆ ನಾ ಬಲ್ಲೆ ನಿನ್ನ ಅಂತರ್ಯವ
ನಿನಗೆ ಬೇಕಿರುವುದೇನೆಂದು ?
ಹತ್ತು ಜನರ ಹಣತೆಯಲ್ಲಿ
ಮಿನುಗಿ ಮಿಂಚಿ
ಮುಪ್ಪಾಗದ
ನರಿಗೆ ಮುದುಡದ
ವಿಶಾಸಲಳಿಯದ ಅಕ್ಷತಕನ್ಯೆ
ಪರಮ ಪತಿವ್ರತೆಯು ವ್ರತನಿಷ್ಠೆ
ಬೇಡ ಗಂಡೆ ಬೇಡ
ಸೀತೆ ಸಾವಿತ್ರಿಯರ ನೆರಳ
ಪಾತಿವ್ರತ್ಯದ ತಕ್ಕಡಿಯಲ್ಲಿ
ನನ್ನನ್ನಿಟ್ಟು ತೂಗಿ ತೂಗಿ
ಇಲ್ಲದ ಎತ್ತರಕ್ಕೇರಿಸಬೇಡ
ನಾನೇನು ಸನ್ಯಾಸಿನಿಯೆ ?
ನಿನ್ನಂತೆ ಜೀವದ ಮಗ್ಗುಲ ಬಲ್ಲವಳೆ ?
ಹಸಿಹಸಿ ಭಾವಗಳ
ಹಸಿ ಹಸಿಯಾಗಿಯೇ ಮುಕ್ಕಿ
ಸುಖಿಸುವ ಹರಯವಿನ್ನು ಮಾಸಿಲ್ಲ
ನಾನು ಸಾಮಾನ್ಯ ಹೆಣ್ಣು
ನಿನ್ನ ಭಾವ ಭಾವನೆಗಳಿಗೆ

ಬೆಳಕ ಹಚ್ಚಿದರಷ್ಟೆ ಸಾಕು ನನಗೆ
ಆಗ
ಹೆಣ್ಣು–ಗಂಡಿನ
ಇಷ್ಟು ಕಾಲದ ಬಾಳ್ವಿಗೆ
ನೈಜ ಪ್ರೀತಿಗೆ
ಅರ್ಥ ಬರುತ್ತದೆ
ನಿತ್ಯಕಾಡುವ
ಶಂಕಿತ ನೋಟಕ್ಕೆ
ನಾನು ಬೆಚ್ಚಿಬೀಳುವುದಿಲ್ಲ
ಮನಮುದುಡಿ ಮೈಲಿಗೆಯಾಗದೆ
ಮುಕ್ತವಾಗಿ
ನಾನುಳಿದುಕೊಳ್ಳುತ್ತೇನೆ
ನಿರಾಳವಾಗಿ ಉಸಿರಾಡುತ್ತೇನೆ
ಬವಣೆ ಬದುಕ ಗೆಲ್ಲುತ್ತೇನೆ
ಆದ್ದರಿಂದ
ನೂರು ನಾಲಿಗೆಗೆ
ವಸ್ತುವಾಗಿಸದೆ
ನನ್ನಷ್ಟಕ್ಕೆ ನನ್ನ ಬಿಟ್ಟು ಬಿಡು
ನನಗೆ ಬೇಕಿರುವುದು
ನಾನು
ನಾನಷ್ಟೆ !
ಮತ್ತೆಲ್ಲ ಬರಿಸುಳ್ಳು.

ಆಶಾವಾದಿ

ಅರಮನೆಯಂಥ ಮನೆ
ಮನೆತುಂಬ ಜಗಜಗಿಪ
ಒಡವೆ ವಸ್ತ್ರಗಳು ಪೀಠೋಪಕರಣ
ಬೇಡಿಕೆಗೆ ಓಗೊಡುವ ದನಿಗಳು
ಓಲೈಸುವ ಪತಿ, ಬಂಧು ಮಿತ್ರರು
ಈ ಹಿರಣ್ಯಗರ್ಭದಲ್ಲಿ
ಅಡಗಿ ಕೂತ ನನಗೆ
ನಾನೇ ಕಾಣಿಸುತ್ತಿಲ್ಲ
ಬಿಟ್ಟ ಎವೆ ಬಿಟ್ಟಂತೆ
ಮುಚ್ಚಿದ ಕಿಟಕಿಗಳತ್ತ ದೃಷ್ಟಿ
ಟಿವಿ, ಫ್ರಿಜ್, ಗ್ರೈಂಡರು ಕಾರು ಎಲ್ಲಾ ಬೋರು
ಸಂಘ ಸಂಸ್ಥೆಗಳ ಅಧ್ಯಕ್ಷಿಣಿ ಪಟ್ಟ
ಉಪನ್ಯಾಸ
ಹಾರ ತುರಾಯಿ
ಹೊಗಳಿಕೆ ತೆಗಳಿಕೆ
ಇಲ್ಲೆಲ್ಲ ನಾನು ನನಗಾಗಿ ಹುಡುಕಿ ಸೋತಿದ್ದೇನೆ
ಸೋತು ಸೊಪ್ಪಾಗಿದ್ದೇನೆ !
ಎಲ್ಲೆಲ್ಲೂ ಕಾಡುವ ಅನಾಥ ಪ್ರಜ್ಞೆಯಲಿ
ಸಹಪ್ರಯಾಣಿಕರ ಕಂಡು
ಸಮಾಧಾನಗೊಳ್ಳುತ್ತೇನೆ
ದಕ್ಕದ ವರ್ತಮಾನದಲಿ
ದಕ್ಕಬಹುದಾದ ಭವಿಷ್ಯತ್ತಿನಲಿ
ಭ್ರಮಾಧೀನಳಾಗಿ
ಸೇತುವೆ ಕಟ್ಟುವ ಚಟಕ್ಕೆ ತುತ್ತಾಗಿ
ಉಳಿದಿದ್ದೇನೆ
ಆಶಾವಾದಿ ಪ್ರತಿಮೆಯಾಗಿ.

ನನ್ನವನು

ಎಲ್ಲರಂಥವನಲ್ಲ
ನನ್ನ ಮನದನ್ನ,
ಅಪರೂಪ ಪರುಷ ಮಣಿಯಿವನು
ನನ್ನ ತುಂಟ ಕುದುರೆಯ
ಕಣ್ಣ ಪಟ್ಟಿಕಟ್ಟಿ
ಉದ್ಯಾನಕ್ಕೆಳೆತಂದು
ಹಸಿರು ಹಳದಿ ನೀಲಿ ಕೆಂಪು
ಮತ್ತೆ ಬಿಳಿ ತರಾವರಿ ಪುಷ್ಪಗಳ
ಮುಳ್ಳು ಬೇಲಿಗಳಲ್ಲೇ ಪರಿಚಯಿಸಿದವನು
ಜೀವರಸವ ಮೊಗೆ ಮೊಗೆದು ಕುಡಿಸಿ
ಮುದಗೊಳಿಸಿ ಮದವೇರಿಸಿ
ನರನರಗಳ ಹೊಸೆದು ಹುರಿಮಾಡಿದವನು
ಹಗಲು ಇರುಳ ಟಂಕಸಾಲೆಯಲಿ
ಮತದ ಗುಂಡುಗುರಾಣಿ
ಹಿಡಿದು
ತಿವಿದು
ಹದಗೊಳಿಸಿದವನು
ಹೆದೆಯೇರಿಸಿದ ಚಾಪದಲಿ
ಕಾಮನ ಬಿಲ್ಲ ಬಣ್ಣಗಳ ಹೂಡಿ
ರುದ್ರತಾಂಡವವಾಡಿದವನು
ನಾಗರ ಕಾವಲಲಿ
ನಾ ನಡೆವ ಹಾದಿಯೊಳೆಲ್ಲ
ಪರಿಮಳದ ಮಲ್ಲಿಗೆ ಹಾಸಿ
ಮೆಲುವಾಗಿ ಅಪ್ಪಿ ನಡೆಸಿ
ನನ್ನನುಳಿಸಿದವನು.

ಭ್ರಮನಿರಸನ

ಒಂದೊಂದೆ ಚುಕ್ಕೆಯು ಬೊಟ್ಟಿಟ್ಟು
ಬಿಡಿಸ ಹೊರಟಿದ್ದೆ ರಂಗೋಲಿ
ಸಾರಿಸಿದ ಹಸಿರುಡೆಯು ಒಡಲಿಗೆ
ಹೊನ್ನು ಹವಳ ಕೆಂಪು
ರಂಗು ರಂಗಿನ ವರ್ಣ ಲೇಪಿಸಿದ್ದೆ
ಜೀವತಳೆದ ಚಿತ್ತಾರಕ್ಕೆ
ಜರತಾರಿ ಲಂಗ ಕುಪ್ಪಸ ತೊಡಿಸಿ
ಚೆಲುವ ಬರಿಸಿದ್ದೆ
ಕಣ್ಗೆ ಕಾಡಿಗೆ ಹಚ್ಚಿ
ಹಣೆಗೆ ತಿಲಕವನಿಟ್ಟು
ಮೋಡಿ ಮುಖಕೆ
ಲಾವಣ್ಯ ತರಿಸಿದ್ದೆ
ಮೋಹಕ ಚೆಲುವಿಗೆ
ಯೌವ್ವನದ ಕಳೆ ಏರೆ
ಸಂಸಾರ ರಥಕೆ
ಚಕ್ರಗಳ ಹೂಡಿದ್ದೆ
ಕಡಾಣೆಯಿಲ್ಲದೆ
ಆಯತಪ್ಪಿ ಉರುಳಿದ ಗಾಲಿ
ರಂಗೋಲಿ ವರ್ಣಗಳಲಿ ತೇಲಿ
ಕೆಸರಾದದ್ದು ಕಂಡು
ದಿಗ್ಮೂಢಳಾದೆ.

ಪೊರೆಕಳಚು

ಬರುತ್ತಿದೆ ವಸಂತ
ಜಗತ್ತು ಸ್ವಪ್ನಸ್ಥಿತಿಗಿಳಿವ ಮುನ್ನ
ಎಚ್ಚೆತ್ತು, ಏಳು ಹಸಿರುಟ್ಟು
ಗರಿಗೆದರಿ ನರ್ತಿಸು
ನಿನ್ನ ಸಂತತಿಗೆ ತುಂಬು ಚೈತನ್ಯದುಸಿರ
ಹುಟ್ಟಿನ ಜೊತೆಗೆ ಅಂಟಿ ಬಂದ
ಪರಂಪರೆಯ ಸಂಕೋಲೆಯಿಂದ
ಪಡೆ ಬಿಡುಗಡೆಯ
ಬಾಲ್ಯದಲಿ ತಂದೆ ತಾಯ್ಗಳು
ಹಾಕಿದ-ಗೋಡೆಗಳಾಚೆ ಇಣುಕಲಾರದೆ
ಬಾಗಿದ ರೆಪ್ಪೆಗಳು
ಹರಯದ ಗಂಡನ ಕೈಗೊಂಬೆಯಾಗಿ
ಅಳಿಸಿದಾಗ ಅತ್ತು
ನಗಿಸಿದಾಗ ನಕ್ಕು
ಉಪಭೋಗದ ವಸ್ತುವಾಗಿ
ಕಳೆದುಕೊಂಡ ಕನಸುಗಳು
ಮುಪ್ಪಿನಲಿ
ಒಡಲ ಕುಡಿಗಳು ನೆಟ್ಟ ಸರಳಲ್ಲಿ
ಕಾಲು ಮಡಚಿಕೊಳ್ಳಲಾರದೆ
ಮೈ ಮುದುಡಿಕೊಳ್ಳುವ
ಅವಸ್ಥೆಗಳು
ಇವೆಲ್ಲ
ಒಂದೇ ಭೂಮಿಕೆಯ
ಪರ್ಯಾಯ ವ್ಯವಸ್ಥೆಗಳು

ಬಿಡಿಸಿಕೊಳ್ಳಲಾಗದ ಕಾರಸ್ಥಾನಗಳು
ನೀನಾದರೂ ಏನು ಮಾಡಿದೆ ?
ಪುರುಷ ನೇದ
ಮೋಹಕ ಬಲೆಯಲ್ಲಿ
ಎಳೆ ಬಾಳೆ ವಿಣಾನಾಗಿ
ನರಳಿ ನಕ್ಕೆ
ಅವನ ಸಾಮ್ರಾಜ್ಯಶಾಹಿ ದಾಹಕ್ಕೆ
ಬರಿಯ ದೇಣಿಗೆಯಾದೆ
ಶೀಲ ಸಂಹಿತೆಯ ಪವಿತ್ರ ರಕ್ಷೆಯ
ಕಡಾಣಿರಹಿತ ತೇರಿಗೆ ಒಡತಿಯಾಗಿ
ಪಾಲಿಗೆ ಬಂದದ್ದೇ ಪರಮೋನ್ನತಿಯೆಂದು
ಹೆಮ್ಮೆಯಿಂದ ಬೀಗಿದೆ
ಮನವ ಮಾರಿದೆ
ಪರಂಪರೆಯ ರಕ್ತದಲ್ಲಿ ಮಿಂದ ಮಡಿವಂತಿಕೆಯಲ್ಲಿ
ನೇಣುಗಂಬಕ್ಕೆ ಕತ್ತೊಡ್ಡುತ್ತಿರುವುದ ಮರೆತೆ
ಇದಿಷ್ಟೆ ನಿನ್ನ ಧರ್ಮವಲ್ಲ
ಸಿಗರೇಟು ಸೀಮೆಎಣ್ಣೆ ಪೆಟ್ರೋಲುಗಳ ಹೊಗೆಯಲ್ಲಿ
ಸುಡುವ ಮನಸ್ಸಿಗೆ
ನೈತಿಕತೆಯ ಅಣೆಕಟ್ಟು ಕಟ್ಟಿ
ನೈಜ ಆದರ್ಶಕ್ಕೆ ಹಕ್ಕುಧಾರಿಣಿಯಾಗು
ಬಂಜೆಶಯನವ ಹದಗೊಳಿಸಿ
ಎದೆನೀರ ಬಸಿದು ಹಸಿಗೊಳಿಸಿ
ಬೆಂದ ಕಾಡನು ಬೆಳೆಸು
ಕೊಳೆತ ಹಳುವ ಹಸನುಗೊಳಿಸು
ಮಂಜ ಕರಗಿಸಿ

ಮಿಂಚ ಹೊಮ್ಮಿಸು
ಹೊಸ ತೆನೆಯು ತೂಗಿಸು
ಹೋಮಾಗ್ನಿ ಸಂತರ್ಪಣೆಯು ನಿಲ್ಲಿಸಿ
ಸಂಪನ್ನತೆ ಸಂಪತ್ತಿಯು ಹೆಚ್ಚಿಸು
ಒಲಮೆ ಕಟ್ಟನು ಒಡ್ಡಿ
ಋತುಮಾನಗಳ ಗೆಲ್ಲು
ಆಗ
ಕಲ್ಲಲೂ ಹೂವು ಅರಳೀತು.

ಉಂಟೆ ?

ಮೈಮನವ ಕೂಡದನ್ನಕ್ಕ
ಸಂಸಾರಕ್ಕುಂಟೆ ನೆಲೆ ?
ಪ್ರೇಮ ಕಾಮವ ದಾಟದನ್ನಕ್ಕ
ಸಾಕ್ಷಾತ್ಕಾರಕ್ಕುಂಟೆ ಬೆಲೆ ?
ಪುಣ್ಯ ಕರ್ಮವ ಕ್ಷಯಿಸದನ್ನಕ್ಕ
ಸಾಧನೆಗುಂಟೆ ಸೆಲೆ ?
ಜೀವಕೆ ಜೀವನ್ಮುಕ್ತಿಯಹಾಗದನ್ನಕ್ಕ
ಆತ್ಮಕ್ಕುಂಟೆ ಮೋಕ್ಷ ?

ಗೆಳೆತನ

ನೀನು ಬಳಿ ಬಂದಾಗ
ಅರುಣೋದಯವಾಯ್ತು
ತುಂಬಿ ನಕ್ಕನು ಚಂದ್ರ
ಬೆಳಕಿನೊಳಗೆ
ಯಾವ ಸೆಳೆತವೊ ಕಾಣೆ
ಯಾವ ಭಾವವೊ ಕಾಣೆ
ಮಾಟಿ ಮಿಡಿಯಿತು ಹೃದಯ
ಸಪ್ತಸ್ವರ ರಾಗ
ಒನಪು ವಯ್ಯಾರಗಳು
ಬೆಡಗು ಬಿನ್ನಾಣಗಳು
ಬೆಳಗಿದವು ಬದುಕ
ಬೆರಗ ಬಾನಂಗಣದಿ
ಸುಳಿದ ನಕ್ಷತ್ರ ಲೋಕ
ನಾನಿದ್ದೆ ನಿರಾತಂಕ
ಹಗಲಲಿ ನೆನಪಾಗಿ ಇರುಳಲಿ ಕನಸಾಗಿ
ಕಾಡುತ್ತಿವೆ ನನ್ನ, ಮುಕ್ತಿ ಇಲ್ಲವೆ ಇನ್ನ
ಬೇಸಿಗೆಯ ಬೆವರಂತೆ ನೀಗಲಿ
ಕಹಿ ನೆನಪು
ಮೂಡಿಬರಲುತ್ಸಾಹ
ಮತ್ತೆ ಮನಕೆ
ಚೆಲುವಿನಲಿ ಗೆಲುವಿರಲಿ
ಒಲವಿನಲಿ ಬಲವಿರಲಿ
ಹುಳಿ ಹೆಪ್ಪುಗಟ್ಟದಿರಲಿ
ಸ್ನೇಹ ರಸಬಳ್ಳಿ

ಅಭಿಸಾರಿಕೆ

ಒಂದೇ ಸೂರಿನಲಿ
ಅಕ್ಕಪಕ್ಕದಲ್ಲಿದ್ದರೂ
ಪರಸ್ಪರ ಯೋಜನದೂರ
ಇದು ಸವೆದಹಾದಿ ಹೊಸತಿಲ್ಲ, ನಿಜ
ಸವೆಸಲಾಗದ ತುಂಬುಬವಣೆ ಮುಂದು
ಚಿಂತೆಯ ನಿಶ್ಶಬ್ದ ದಹಿಸುವಿಕೆ
ಉರಿವ ಎದೆಯ ಕರಕುವಾಸನೆ
ಸ್ಮಶಾನಮೌನ
ಜಿರಲೆಯ ಕರಕರ ಸದ್ದುಗಳ ನಡುವೆ
ತುಂಡು ಆಕಾಶದ
ಮಿಣುಕು ನಕ್ಷತ್ರಗಳ ಎಣಿಕೆ
ತಪ್ಪುವ ಲೆಕ್ಕಗಳ ಸರಮಾಲೆ
ಅಡಗಲಾಗದ ಬಯಲು ದಾರಿ
ಬರಿದೋ ಬರಿದು
ಕಣ್ಣೀರಿಂದ ತುಂಬಿ ಹರಿವ ಕೋಡಿ
ಛಿದ್ರ ವಿಚ್ಛಿದ್ರ ಮನುಷ್ಯತ್ವ
ಕೃತಕ ಕಲಸು ಬಣ್ಣಗಳ ತೊಟ್ಟು
ಮಲ್ಲಪಟ್ಟುಗಳೊಡನೆ ಸರ್ವಸಿದ್ಧತೆ
ಲೋಹದ ಚುಂಬನ
ಹಾವಿನ ಹೊಡೆತ
ಗೀಚಿದ ಗೀರುಗಳಲ್ಲಿ
ಜಿನುಗುವ ನೆತ್ತರು
ಸೀಳಿದ ಮಾನವೀಯತೆಯಲ್ಲಿ
ಕಿತ್ತ ಬಯಕೆಗಳಿಂದ

ರಾಕ್ಷಸ ಸಂತಾನದ ಮರುಹುಟ್ಟು
ಇಂಥ ನಿರಂತರ
ಯಾತನಾಮಯ ಗತಿಯಲಿ
ನಾನು ಮಾತ್ರ ಅಭಿಸಾರಿಕೆ.

ಆಶ್ವಾಸನೆ

ಆತಂಕವೇತಕೆ ಮಗನೆ
ಬೇಕಾದ್ದ ನಾನೀವೆ
ಬೆಳೆಯುವುದಷ್ಟೆ ನಿನ್ನ ಪಾಡು
ಉಳಿದದ್ದೆಲ್ಲ ನನಗೆ ಬಿಡು
ದುಷ್ಟಬಾಹುಗಳ ಚಾಚಿ
ಎತ್ತಿಕೊಂಡೊಯ್ಯುವ
ಅನಿಷ್ಟಗಳ ಪುಡಿ ಪುಡಿ ಮಾಡಿ
ನಿನ್ನನುಳಿಸುವೆ ಕಂದ
ಜಾತಿಮತ ಮೌಢ್ಯಗಳು
ಸುಳಿಯದಿರಲಿ ನಿನ್ನ ಬಳಿ
ಭೂಮಿಯ ಬಿತ್ತರಕೆ
ಆಕಾಶದೆತ್ತರಕೆ ನೀನು ಬೆಳೆ
ನಿನ್ನೆಲ್ಲ ಬಯಕೆಗಳ
ಬೇರಿಗೆ ಗೊಬ್ಬರವಾಗಿ
ನೆರವಾಗುವೆ ಹಬ್ಬಲು
ನಿನ್ನ ರಸಬಳ್ಳಿ
ಕಷ್ಟ ಸುಖಗಳ
ಅಳಿವು ಉಳಿವುಗಳ
ಚಕ್ರದಾಚೆಗಿನ ಸತ್ಯಕ್ಕೆ
ಬೆಳಕಾಗುವೆನು ನಾನು
ಕೋಟೆ ಕೊತ್ತಲವೇರಿ
ಹಳ್ಳಕೊಳ್ಳವ ಹಾಯ್ದು
ಬೇಕೆಂದ ಭೋಗವನೆ
ಹೊತ್ತು ತರುವೆ

ಬಿರಿವ ಬೇಗೆಗೆ
ಕೊರೆವ ಚಳಿಗಾಳಿಗೆ
ಮೈತಾಗದ ಹಾಗೆ
ಒಡಲಲ್ಲಿ ನಿನ್ನ ಬಚ್ಚಿಡುವೆ.

ಕಿವಿಮಾತು

ಹೆಣ್ಣೆ
ನೀನು ಮಾಯಾಂಗನೆ !
ನಿನ್ನಾಳ ವಿಸ್ತಾರ ವೈವಿಧ್ಯ ಏನೆಂದು ಹೇಳಲಿ ?
ಎಷ್ಟೆಂದು ವರ್ಣಿಸಲಿ ?
ನೀನು ಪ್ರಕೃತಿ, ನಿನ್ನ ಧರ್ಮವು ಅಂತೆ !
ರಾವಣಗೆ ಸೀತೆಯಾಗಿ ಕಾಡಿ, ನಿದ್ದೆಕೆಡಿಸಿ
ಅವಸಾನ ತಂದು ಅವತಾರಿ ಎನಿಸಿದೆ
ಇಂದ್ರಗೆ ಅಹಲ್ಯೆಯಾಗಿ ಮೋಹ ಮಾಟಿ
ಬೆಚ್ಚಗಿನ ಶಾಖವಿತ್ತು, ಶಾಪಹೊತ್ತು
ಕೊರಗಿ ಕಲ್ಲಾದೆ
ವಿಶ್ವಾಮಿತ್ರಗೆ ಮೇನಕೆಯಾಗಿ
ರಾಕ್ಷಸರಿಗೆ ಮೋಹಿನಿಯಾಗಿ
ವಂಚನೆಯ ಜಾಲವ ಸೃಷ್ಟಿಸಿದೆ
ಇತಿಹಾಸವ ಅಳಿಸಿದೆ
ಇತಿಹಾಸವ ಉಳಿಸಿದೆ
ಆದರೂ ನಿಲ್ಲದ ರಾಸಲೀಲೆ
ಮನ್ವಂತರಗಳ ಹುಟ್ಟುಯಾತ್ರೆ
ಎಂದೂ ಬದಲಾಗಲಿಲ್ಲ ನೀನು
ಚಂಚಲೆಯು ಹಣೆಬರಹ
ಹುಸಿಯಾಗಲಿಲ್ಲ
ಶೋಷಿಸುವ ಪುರುಷ ವರ್ಗದ ಎದುರು
ನಾಗಿಣಿಯಾಗಿ
ನಿನ್ನ ಸಂತತಿಯನ್ನೇ
ಕುಟಿಲತಂತ್ರಗಳ ಸೇತುಬಂಧನದಲ್ಲಿ

ಸಿಲುಕಿಸುತ್ತ ನರಳಿಸುತ್ತ ಸಾಗಿದೆ
ಶೋಷಣೆಗೆ
ಸುರಿವ ರಕ್ತಕಂಬನಿಗೆ
ಎದೆಯ ದಾವಾನಲಕ್ಕೆ ಕೊನೆ ಎಲ್ಲಿ ?
ಬುದ್ಧಿವಂತಿಕೆಯ ಸೋಗಿನಲ್ಲಿ
ಕಂಡ ಕಂಡ ಗಂಡಿಗೆ
ಮೈಮನ ಹಾಸಿ ಮಿದುಗೊಳಿಸಿ
ನಿಜದ ಹೆಂಡಿರಿಗೆ ತ್ರಿಶಂಕು ಸ್ಥಿತಿಯ ತಂದಿರುವೆ
ಚೆಲುವಿನ ಗರ್ವದಲಿ ಬೀಗುತ್ತ
ಹಾಲು ಹಸುಳೆಗಳಿಗೆ ಬೇಡದ ತಾಯಿಯಾಗಿ
ಸಮಾಜ ಕಂಟಕಳಾಗುತ್ತಿರುವೆ
ಸಮಾನತೆಯ ಸೋಗಿನಲಿ ಸ್ವಚ್ಛಂದತೆಯ ಮೆರೆದು
ಸುಮಧುರ ದಾಂಪತ್ಯಕ್ಕೆ ಎರವಾಗಿ
ಮನೆಯ ರಣರಂಗವಾಗಿಸುತ್ತಿರುವೆ
ಮನಮನಗಳ ನಡುವೆ
ಕಲ್ಲಕೋಟೆಯ ಕಟ್ಟುತ್ತಿರುವೆ
ದಕ್ಕದ ನೆಮ್ಮದಿ
ಹತಾಶ ಬದುಕಿನ ಇಬ್ಬಂದಿತನದಲ್ಲಿ
ನಿನ್ನ ನೀನೆ ನಾಶಗೊಳಿಸಿಕೊಳ್ಳುತಿರುವೆ
(ಇನ್ನೂ) ಕಾಲ ಮಿಂಚಿಲ್ಲ
ಸ್ವತಂತ್ರತೆಯೇ ಸ್ವಚ್ಛಂದವಲ್ಲ
ಶರಣರ ಸಂಧಾನವೂ ಇಲ್ಲಿಲ್ಲ
ಇದತಿಳಿದು ಹುಡುಕು
ಖಂಡಿತ ಕಾಲಿಗೆ ತೊಡರೀತು
ನೀ ಬಯಸಿದ ಬದುಕು.

ಬೇಗುದಿ

ಹಸನಾದ ಪಗಡೆ ಹಾಸು
ಕಾಯಿಗಳ ಆಟಾಟೋಪದಲ್ಲಿ
ಗೊನೆಕಚ್ಚಿ ಕಳಿತು ಕಳಚಿ
ಬಿದ್ದೆ ನಿನ್ನಂತೆ ಭುವಿಗೆ
ಅಮ್ಮನ ಮಡಿಲ ಮಲ್ಲಿಗೆಯ ಪರಿಮಳ
ಅಪ್ಪನ ಹದ ಎದೆಯ ಕವುಟಿನಲಿ
ಮೈಮುದುಡುತ್ತ
ಮಾತು ಕಲಿತು
ನಕ್ಕು ನಲಿದು ನುಲಿಯುತ್ತ
ನೀ ಬೆಳೆದಂತೆ ನಾನೂ ಬೆಳೆದೆ
ಆದರೇನು ?
ಮರ್ತ್ಯ ವಿಧಿ
ಅಮ್ಮನ ಗುದ್ದಿಗೆ ಬಾಗಿದ ಬೆನ್ನು
ಅಜ್ಜಿಯ ಕಟ್ಟಿಗೆ ಒತ್ತಿದ ಗಂಟಲು ಹೊತ್ತು
ಕುಬ್ಜಳಾಗಿ
ತಲೆಮಾರಿನ ಹಾದಿಯಲ್ಲಿ
ಕುಳಿತಲ್ಲೇ ಕುಳಿತಿದ್ದೇನೆ ಕಾಯುತ್ತ
ನೀನು ಮಾತ್ರ
ಹೊಸ ಹೊಸ ರಂಗು ತೊಟ್ಟು ತೊಳಸಿ
ನಿರಂತರ
ಮಂಟಪೋತ್ಸವ ನಡೆಸಿ
ನಾನು ನೋಡು ನೋಡುತ್ತಲೇ
ಕಬಂಧಬಾಹುಗಳ ಚಾಚಿ
ಬಾನೆತ್ತರಕೆ
ನೆಲದಾಳಕ್ಕೆ

ಬೇರು ಬಿಟ್ಟು
ರೆಂಬೆ ಕೊಂಬೆಗಳ ಕಚ್ಚುತ್ತ
ದಶಾವತಾರವ ಎತ್ತುತ್ತಲೇ ಇದ್ದಿ
ಇದ ಕಂಡು
ಸಹಿಸಲಾಗದೆ
ಪಂಜಾಬಿನ ಭಯೋತ್ಪಾದಕರಂತೆ
ನಿನ್ನ ಗುಂಡಿಕ್ಕಿ ಕೊಲ್ಲಬೇಕೆಂದು
ಮಂಡಿಗೆ ಕೊರೆಯುತ್ತ
ಮಡಿಲಲ್ಲಿ ಗೂಡುಕಟ್ಟಿದ ಬೆಂಕಿ ಪಿಂಡವ
ಗಾಂಧಾರಿಯಂತೆ ಹೊಸೆಯಲೂ ಶಕ್ತಿ ಸಾಲದೆ
ಪಿಳಿ ಪಿಳಿ ಕಣ್ಣು ಬಿಡುತ್ತ
ನನ್ನೊಳಗೆ ನಾನೇ
ಮೌನವಾಗಿ ಸಂಭಾಷಿಸುತ್ತಾ
ಭಯದ ಜಾರುದಾರಿಯಲ್ಲಿ
ತೆಳು ಅವಕುಂಠನ ಹೊದ್ದು
ಮುಸುಕೆಳೆದು ಮಲಗಿದ್ದೇನೆ
ಸುಮ್ಮನೆ
ಮುಲುಕುತ್ತ.

ಎಲೆ ಹುಡುಗ

ಏನು ಹೇಳಲಿ ಹುಡುಗ
ನಿನ್ನ ಕಣ್ಣೊಳಗೆ ಇರುವುದ
ಅರ್ಥವಿಲ್ಲದ ಭೂತಗಳು
ಅರ್ಥೈಸಲಾಗದ ಹುಡುಕಾಟದ
ವರ್ತಮಾನಗಳು
ವ್ಯರ್ಥವಾಗಿ ಹೋಗಬಹುದಾದ
ಭವಿಷ್ಯತ್ತುಗಳು
ಏನು ಹೇಳಲಿ ಹುಡುಗ
ಅಮ್ಮನವನೂ ಅಲ್ಲ
ಅಪ್ಪನವನೂ ಅಲ್ಲ
ಮಿತ್ರನೂ ಅಲ್ಲ ಗಂಡನೂ ಅಲ್ಲ
ಮಿಂಡನೂ ಅಲ್ಲ
ಕೊನೆಗೆ ಏನೂ ಅಲ್ಲದ ನಿನಗೆ
ಏನು ಹೇಳಲಿ ಹುಡುಗ
ನೆನೆಕೆಯ ಬಯಕೆಗಳ
ಕನಸಾದ ಆಶೋತ್ತರಗಳ
ನಡುವೆ
ಕರಗಿಹೋಗಿರುವ ನಿನಗೆ
ಏನು ಹೇಳಲಿ ಹುಡುಗ
ನಿನ್ನ ಕಣ್ಣೊಳಗೆ ಇರುವುದ ಕಂಡೂ.

ನಾನು-ನೀನು

ಭಾವ ಮೂಕವಾದಾಗ
ಶೋಕವಲ್ಲದೆ ಮತ್ತೇನು ?
ಹೊಳೆ ಉಕ್ಕಿ ಹರಿದಾಗ
ಪ್ರವಾಹವಲ್ಲದೆ ಮತ್ತೇನು ?
ಮಾತು ಮೌನವಾದಾಗ
ನಾದವಲ್ಲದೆ ಮತ್ತೇನು ?
ಬದುಕು ಸರಸವಾದಾಗ
ಸಮರಸವಲ್ಲದೆ ಮತ್ತೇನು ?
ನಾನು ನೀನಾದಾಗ
ನೀನು ನಾನಾದಾಗ
ಸೃಷ್ಟಿಯಲ್ಲದೆ ಮತ್ತೇನು ?

ಅವಲೋಕನ

ಮುಗಿದ ವಸಂತಗಳ
ಮೆಲುಕುಗಳಲಿ
ಹರಿದ ಹರೆಯದ
ನೆನಕೆಗಳು
ಒಡೆದ ಕನ್ನಡಿ ಚೂರಲಿ
ಕಂಡ ಪ್ರತಿಬಿಂಬ
ಬೆಚ್ಚಿ ಬೀಳಿಸುತ್ತದೆ
ಹೆರಳಲ್ಲಿ ಮೂಡಿದ
ಬೆಳ್ಳಿ ರೇಖೆಗಳು
ಕಣ್ಣ ಸುತ್ತಿರುವ
ಕಪ್ಪು ವೃತ್ತಗಳು
ಹಣೆಯ ಮುತ್ತುತ್ತಿರುವ
ತೆರೆಯ ನರಿಗೆಗಳು
ಸಾಕ್ಷಿ ಹೇಳುತ್ತಿವೆ
ನಿನಗೂ ವಯಸ್ಸಾಯ್ತು !
ವರ್ಷ ನಲವತ್ತೈದಾದರೂ
ಆಗದ ಮದುವೆ
ಕೊಳ್ಳಲಾಗದ ವರನ ಕರಭಾರ
ಬೆಸೆಯಲಾಗದ ಮನಗಳು,
ಕೇಕೆ ಹಾಕುತ್ತವೆ
ಆದರೂ
ನನ್ನ ಸುತ್ತೆಲ್ಲ
ಕಲ್ಪನೆಗಳ ಮೊರೆತ
ಕನಸುಗಳ ಅಣಕ

ದೇಹದಲ್ಲೆಲ್ಲ
ಕಸುವಿನ ಸೆಳೆತ
ನನಗೂ ಗೊತ್ತು
ನನ್ನ ಸೊಂಡಿಲಲಿ
ನಾನೇ ನೀರು ಕುಡಿದು
ನಡೆದುದರ ಫಲವಿದು
ಇಷ್ಟಾದರೂ
ಕೈಜಾರಿ ಹೋಗುವ
ಕಾಲಗತಿ
ಕುಗ್ಗಿದ ದೇಹ
ಉತ್ತರಿಸುತ್ತದೆ
ಇನ್ನೇಕೆ ಈಗ ಮದುವೆ
ಬಿಡು ತರವಲ್ಲ.

ಬಾಳಗುಟ್ಟು

ಬಾಳೊಂದು ಹಸಿಸುಳ್ಳು
ಬೆಳ್ಳಿಯ ನೊರೆ
ಬಿರುಕು ಗೋಡೆ
ಮುಸುಕಿನೊಳಗಣ ಗುದ್ದು
ತುಕ್ಕು ಹಿಡಿವ ಪ್ರೀತಿಯ ತೆಕ್ಕೆಯಲಿ
ವ್ಯವಹಾರ ಕುಶಲತೆಯ ಸಂಬಂಧಗಳು
ಕುಸಿದ ಮೌಲ್ಯಗಳು
ಸಾಕಿದ ನಾಯಂತೆ
ಕೋಲೆಬಸವನಂತೆ
ಮಾತು ಕಲಿತ
ಮುದ್ದುಗಿಳಿಯಂತೆ
ಸದ್ದು ಮಾಡದೆ ಬದುಕುವ ಹೆಣ್ಣಿಗೆ
ಕಿಂಚಿತ್ತು ದಕ್ಕೀತು ತಾತ್ಸಾರದ ಕೃಪೆ
ಇಲ್ಲವಾದರೆ
ಬದುಕೆಲ್ಲಿ ?
ಭೂಮಿ ಬಿರಿಯಬಹುದು
ಗಗನ ಸಿಡಿಯಬಹುದು
ಶಿವ ತಾಂಡವವಾಡಬಹುದು
ಸಾವು ಬದುಕಿನ
ನೋವು ನಲಿವಿನ
ದಂಡೆಗಳ ನಡುವೆ ತೂಗಿ
ನರಳುತ್ತ ನವೆಯುತ್ತ
ಸಹಗಮಿಸುವ ಹೆಣ್ಣಕಂಡು
ಸಹಧರ್ಮಿಣಿ ಹೆಣ್ಣು

ನಗುವ ಮುಖವಾಡ ಧರಿಸಬಹುದು
ಆತ್ಮವಂಚನೆಯ
ಗರಳ ಸಾಗರದಲ್ಲಿ
ನಿರಂತರ ದಾರಿ ಸವೆಸಬಹುದು.

ಬೈರಿಗೆ

ಮಾತು ಬಲ್ಲವರೆಲ್ಲ
ಮರ್ಮವರಿತವರಲ್ಲ
ಪದವಿ ಪಡೆದವರೆಲ್ಲ
ಪಂಡಿತರೂ ಅಲ್ಲ
ಜ್ಞಾನವಿದೆಯೆಂಬ ಭ್ರಮೆಯಲ್ಲಿ
ಪರಿಜ್ಞಾನವ ತ್ಯಜಿಸಿ
(ಅ)ಜ್ಞಾನದ ಹೊಟ್ಟನ್ನು ಕುಟ್ಟುವ ಈ ಮಂದಿ
ಕಿವಿಗೆ ದಬ್ಬಳವಾಗಿ
ತಲೆಗೆ ಬೈರಿಗೆಯಾಗಿ
ಧನ್ಯತೆಯ ಪಡೆಯುವರು
ನಮಗೋ
ಕುಂತ ಮೆತ್ತಗಿನ ಹಾಸು ಯಾ ಕುರ್ಚಿಕೂಡ
ದಯೆ ಬಿಟ್ಟು
ಕಾದ ಕಬ್ಬಿಣವೆನಿಸಿ
ಇಕ್ಕಳವಾಗಿ ನಮ್ಮ ಚುಚ್ಚುವುದು
ಮಾನ್ಯರೆ
ನಮಗೆ ಆಯುಸ್ಸಿರುವುದೇ ಸ್ವಲ್ಪ
ನಾವು ಸಾಧಿಸಿರುವುದೂ ಅಲ್ಪ
ನಮ್ಮತ್ತ ಕೃಪೆದೋರಿ
ನಿಮ್ಮ ಬಡಾಯಿ ಬಾಯಿಗೆ
ಬಡಿದು ಕಡಾಣಿ
ನಮ್ಮನುಳಿಸಿ
ಬೆಳಗಕೊಡಿ ಅವಕಾಶ.

ನಿರೀಕ್ಷೆ

ನನ್ನೆಲ್ಲ ಬೇಕುಗಳ ನಡುವೆ
ಇರುವ ನಿನ್ನ
ದೂರ ಸರಿಸಲಾಗದ
ವಿಕ್ಷಿಪ್ತತೆ ನನ್ನದು
ಕೆಲವೊಮ್ಮೆ ಭಾವನೆಗಳಿಗೆ
ರೆಕ್ಕೆ ಮೂಡಿ ಗರಿಗೆದರಿ
ಹಕ್ಕಿಯಂತೆ ಹಾರಾಡುತ್ತವೆ
ಮರುಕ್ಷಣ ಹೆಪ್ಪುಗಟ್ಟಿ
ಭೂತದಂತೆ ಕೆಣಕುತ್ತವೆ
ಮೂಲಪಥದಿಂದ
ಚಲಿತಗೊಂಡು ಮುದುಡುತ್ತವೆ
ಹೀಗಿದ್ದೂ
ಎಂದಾದರೊಮ್ಮೆ
ಭಾವಕ್ಕೆ ಜೀವ ಬಂದು
ನೈತಿಕತೆ ಸಮಾಜ ಬಂಧನಗಳ ಕಡಿದು
ನೀರಾಗಿ ಹರಿದು ನಿನ್ನಲ್ಲಿ
ಐಕ್ಯವಾಗಿ ಬಿಡುತ್ತವೆ
ಆ ದಿನಕ್ಕಾಗಿ
ಕಾದ ರಾಧೆಯಾಗುವೆ
ಅಹಲ್ಯೆಯಾಗುವೆ
ಪಂಚಪತಿವ್ರತೆಯರಲ್ಲಿ ಒಬ್ಬಳಾಗುವೆ
ಸೃಷ್ಟಿ ಸ್ಥಿತಿಲಯಕ್ಕೆ
ಚುಕ್ಕಾಣಿಯಾಗುವೆ.

ಮೂರೇದಾರಿ

ಈ ದಿನಗಳಲ್ಲಿ
ಏನೇ ಕೆಲಸ ಸುಲಭದಿಂದಾಗುವುದು ಕಷ್ಟ
ಅವು ಆಗಲೇ ಬೇಕೆಂದಿದ್ದರೆ
ನಿಮಗೆ
ಒಂದಲ್ಲ ಒಂದು ನಷ್ಟ
ಇರುವುದು ಮೂರೇದಾರಿ
ಬಹಳ ಪರಿಣಾಮಕಾರಿ
ನಿಮ್ಮ ಕೆಲಸ
ಸ್ವಲ್ಪ ಸಜ್ಜನರ ಬಳಿಯೆ
ಕೊಡಿ ಒಂದು ಪಾರ್ಟಿ
ಇನ್ನೂ ದುಬಾರಿಯೇ
ಅದಕ್ಕಾಗಿಯೆ ಪುಢಾರಿಗಳಿದ್ದಾರೆ
ನೀಡಿ ಲಂಚ
ಲಂಚ ಪಾರ್ಟಿಗಳಿಗೂ
ಜಗ್ಗದ ಮಹತ್ಕಾರ್ಯವೆ
ಹಾಗಿದ್ದರೆ
ಸಂಬಂಧಿತರನ್ನು ಏರಿಸಿ ಮಂಚ
ಇರುವುದು ಮೂರೇದಾರಿ
ಖಂಡಿತ ಪರಿಣಾಮಕಾರಿ.

ಊಸರವಳ್ಳಿಗಳು

ಮಾತಿನಲಿ ಹರಿತ ಮೊನಚು
ನೋಟದಲಿ ಇರಿತ ಸೆಳೆತ
ತಮ್ಮದೆ ಕಪ್ಪು ಚಾಳೀಸು ಧರಿಸಿ
ಸಮಯಕ್ಕೆ ತಕ್ಕ ಚಾಣಕ್ಯ ತಂತ್ರ ಹೂಡಿ
ಜನಮನವ ದೋಚುವ ದರೋಡೆಕೋರರು
ಇವರೇ ನವಸಮಾಜದ ನಿರ್ಮಾಪಕರು
ನಿರ್ವಾಹಕರು
ಊಸರವಳ್ಳಿಗಳು
ಪ್ರೇಮ ಕಾಮ
ಬದುಕು ಬರಹ ಬೇರೆ ಬೇರೆಂದು
ಉಪಭೋಗಿಸುವುದು ಸರ್ವರ ಜನ್ಮಸಿದ್ಧ ಹಕ್ಕೆಂದು
ವೈಚಾರಿಕತೆಯ ಬೊಗಳೆ ಬಿಡುತ್ತ
ಇಲ್ಲದ ಆದರ್ಶಗಳಿಗೆ ಪೋಜು ಕೊಡುವವರು
ಬಂಡವಾಳವಿಲ್ಲದೆ
ಬಡಾಯಿಕೊಚ್ಚುತ್ತ
ಬಂಡವಾಳಶಾಹಿ ಧೋರಣೆ ಹೊತ್ತುಮೆರೆವ
ಒಂಟಿಸಲಗಗಳು
ಬಾಯಲ್ಲಿ ಪರನಾರಿ ಸೋದರತ್ವದ ಉವಾಚ
ಮನದಲ್ಲಿ ಮಡಿಮೈಲಿಗೆ ಇಲ್ಲದೆ
ಸುಳಿದ ಸೀರೆಯ ಅಂಚ ಹಿಡಿದು
ಬಾಲವಲ್ಲಾಡಿಸುವ ತಾಯಿಗಂಡರು
ಗಾಳಿಯಲ್ಲೇ ಇವರು ಮಾಡ ಕಟ್ಟುತ್ತಾರೆ
ರೈಲು ಹೆದ್ದಾರಿಗಳ ನಿರ್ಮಿಸುತ್ತಾರೆ
ಧಾರಾಳವಾಗಿ ಕಾಮವಾಸನೆಯ ಆಘ್ರಾಣಿಸುತ್ತ

ಹೆಣ್ಣ ಒಡಲ ಬಡಬಾಗ್ನಿಯು ಕೆಣಕಿ
ಪಲಾಯನ ಮಾಡುವ ಷಂಡರು
ಬರಿಬಾಯಿ ಬಡಾಯಿಕೋರರು
ವೇದಿಕೆಯ ಅಗ್ರಪಟ್ಟಕ್ಕೆ ಬೇರುಬಿಟ್ಟು
ಸಮಕಾಲೀನ ಸರಕುಗಳಾದ
ಸಮಾನತೆ ಶೋಷಣೆಗಳೆಂಬ ಭಾರಿಭಾರಿ
ಹಳಸಲು ಪದಗಳ ವಾಕರಿಸುತ್ತ
ಮಡದಿ ಮಕ್ಕಳ ಕೂಡಿ ಬೀಗ ಜಡಿವ
ಕಲಬೆರಕೆಯವರು
ಇವರ ಪ್ರವರಕ್ಕೆ ದೇವರು ದಿಂಡರೆಲ್ಲ
ಮಂಗಮಾಯ
ಮನೆಯ ತಿಜೋರಿಯಲ್ಲಿ ಸುಭದ್ರ
ತುಳಸಿಕಟ್ಟೆ ಸುತ್ತುವ ಮನೆ ಹೆಣ್ಣ ಹೆರಳಿಂದ
ತೊಟ್ಟಿಕ್ಕುವ ಹನಿಗಳಲಿ
ದೈವಕ್ಕೆ ತಪ್ಪ ಕಾಣಿಕೆ ಸಲ್ಲಿಸುವ ಧರ್ಮಾಲಂಡರು
ತಪ್ತ ಮನಸ್ಸಿನವರು
ಸದಾ ನಗೆಯ ಮುಖವಾಡ ಹೊತ್ತು
ಚಲಿಸುವ ಶವಗಳು
ಇಂಥದ್ದೇ ದಾರಿ ಬೇಕಿಲ್ಲ ಇವರಿಗೆ
ಕೆಸರಲ್ಲೂ ಬಿದ್ದು ಎದ್ದು ಮೈಕೊಡವಿ
ಹೊಸಬರಾಗುತ್ತಾರೆ
ಉಗಿದರೂ ತಣ್ಣಗೆ
ಹೂನಗೆಯ ಚೆಲ್ಲುತ್ತಾರೆ
ಇವರನ್ನು ಯಾರೂ ಆಹ್ವಾನಿಸಬೇಕಿಲ್ಲ
ಕುರ್ಚಿಕೊಟ್ಟು ಕುಳ್ಳಿರಿಸಬೇಕಿಲ್ಲ
ಇವರಿಗಿದೆ ಇವರದೇ ಪರಿವಾರ
ರಂಗಭೂಮಿ ರಂಗಸಜ್ಜಿಕೆ

ವೇಷಭೂಷಣಗಳು
ಸಿದ್ಧ ನಟನಟಿಯರು
ಎಲ್ಲೆಂದರಲ್ಲೇ ಬೀಡು ಬಿಡುವ
ತುಡುಗು ದನಗಳಿವರು
ತಮ್ಮ ಛಾಪಿಗಾಗಿ ಮೀಸೆ ಬೋಳಿಸಿಯಾರು
ಮಿಂಡಿ ಧರಿಸಿಯಾರು
ಹೊರಗೊಂದು
ಒಳಗೊಂದು
ಎರಡು ದಂಡೆಗಳ ಕಂದಕವ
ಬೆಸೆಯಲಾಗದ ವಿಕೃತ ಮನೋರೂಪಿಗಳು
ಜೀವಂತ ಯಮದೂತರು
ತಮ್ಮ ಯೋಗ್ಯತೆಗೆ ಮೀರಿದ ಫಲಗಳಿಗಾಗಿ
ಕೈಚಾಚುವವರು
ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಬಿಡಿ
ನಮಗೇಕೆ ಇಂಥವರ ಗೊಡವೆ.

ನೆನಪು

ನಿನ್ನ ಕಂಡಾಗ
ನೆನಪಿನಂಗಳಕೆ ಪಾತಾಳಗರಡಿ ಹಾಕಿ
ಸಿಕ್ಕಿದ್ದನ್ನೆಲ್ಲ ಹುಡುಕುತ್ತೇನೆ
ದೋಚುತ್ತೇನೆ
ಮಡಿಲಲ್ಲಿ ಅವುಚಿಕೊಳ್ಳುತ್ತೇನೆ
ಮಣಿ ಮುತ್ತು ಕಲ್ಲುಮುಳ್ಳು ಮರಳುಗಳ
ಬೇರ್ಪಡಿಸಿ ಕೆದಕಿ ಕೆದಕಿ ನೋಡುತ್ತೇನೆ.
ತಲೆಯಿಲ್ಲದ ಕಾಲಿಲ್ಲದ ಕೈಯಿಲ್ಲದ
ಕಣ್ಣುಕಿತ್ತು ಬಾಯಿಹರಿದ
ಚಿತ್ರವಿಚಿತ್ರ ಬೊಂಬೆಗಳನು
ರಾಶಿ ಮಾಡಿ ನೋಡುತ್ತೇನೆ
ನಾನು ನೀನು ಮದುವೆಯಾಟವಾಡಿದ್ದು
ಬೀಗರಾಗಿದ್ದು ಜಗಳಕಾಯ್ದುದ್ದು ನೆನಪಾಗಿ
ಮುದಗೊಳ್ಳುತ್ತೇನೆ
ಬೊಂಬೆ ಬೊಂಬೆಗಳನು ಕೂಡಿಸುವ
ಪ್ರಯತ್ನ ಮಾಡುತ್ತೇನೆ
ವ್ಯರ್ಥಕಾರ್ಯ
ಬೆಸೆಯಲಾಗದ ಬಿರುಕು
ಮೂಕರೋದನ
ಧೂಳು ತುಂಬಿ ಮುಚ್ಚುವ ಕಣ್ಗಳ
ಉಜ್ಜುತ್ತೇನೆ ದೃಷ್ಟಿ ಮಂಜಾಗುತ್ತದೆ
ಒಟ್ಟುಗೂಡಿದ ಮೋಡ
ಅದುಮಿಟ್ಟ ಮಳೆ.
ಧೋ ಧೋ ಎಂದು ಸುರಿಯುತ್ತದೆ.

ನೆಲೆ

ಓ ಹೆಣ್ಣೆ
ಭೂತದ ಬೇರು ಸೋಸುವ
ಭವಿಷ್ಯದ ಬಸಿರ ಬಗೆಯುವ
ನಿನಗೆ
ವರ್ತಮಾನದಲ್ಲೇಕೆ ನೆಲೆಯಿಲ್ಲ
ಅಹಲ್ಯೆ ದ್ರೌಪದಿ ಸೀತೆಯರ
ಆದರ್ಶದ ಸೆರಗ ಸರಿಸಿ
ಅವರ ಒಳತೋಟಿಗೆ
ದನಿಯಾಗಲೆತ್ನಿಸುವ
ನಿನಗೆ
ನಿನ್ನ
ಅಸ್ತಿತ್ವದಲ್ಲೇಕೆ ಒಲವಿಲ್ಲ
ಭವಿಷ್ಯದ ಬಂಗಾರಕ್ಕೆ
ಬವಣೆ ಪಡುವ ನೀನು
ಸುತ್ತಣ ಜಗವ ಜಾಲಿಸು
ಸೋಸಿದ ಕಾಳಿಗೆ ತುಂಬು ಜೀವ ಕಳೆ
ಬಂದೀತು ಹಸಿರು ಬೆಳೆ
ಕಾಣದ್ದರ ಬೆನ್ನೇರದೆ
ಕಂಡದ್ದಕ್ಕೆ ಬೆನ್ನು ತಿರುಗಿಸದೆ
ಇಹದಲ್ಲಿ ಬದುಕ ಕಲಿ
ಬಂದೀತು ನಿನಗೆ ಬೆಲೆ
ದಕ್ಕೀತು ಬಾಳನೆಲೆ.

ಹಕ್ಕಿಯ ಹರಯ / ನಲವತ್ತೊಂಬತ್ತು

ದಂಡವಾದವಳು

ಕತ್ತಲು
ಬರೀ ಕತ್ತಲು
ಕಾರ್ಗತ್ತಲು
ಹೆಣ್ಣೇ ನಿನ್ನ ಸುತ್ತಲು
ಅನಿವಾರ್ಯಕೆಂಬಂತೆ
ನಿನ್ನ ಸ್ವೀಕರಿಸಿ
ಕರ್ತವ್ಯಕೆಂಬಂತೆ
ಪೋಷಿಸಿ, ಬೆಳೆಸಿ
ಕುರಿಕೋಳಿಗಳಂತೆ
ಬೆಲೆಯ ನಿಶ್ಚೈಸಿ
ಬಿಡುಗಡೆಯ ಪಡೆದರು
ನಿನ್ನ ವಿಕ್ರೈಸಿ
ತವರಿನಾ ಸವಿನೆನಪು
ಮಾಸುವ ಮೊದಲೆ
ಅತ್ತೆಯ ಅರಚಾಟ
ಶುರುವಾಯ್ತು ಇನ್ನ
ಬೆಚ್ಚನೆಯ ಹೊದಿಕೆಯಲಿ
ಬಿಚ್ಚುತ್ತಾ ನಿನ್ನ
ಮುಚ್ಚಟೆಯ ಮಾತುಗಳ
ಆಡಿದನು ಚೆನ್ನ
ಇಚ್ಛೆಯ ಪೂರೈಸೆ
ಕತ್ತಲಲಿ ನೀನು
ಲೀನವಾದನು ಅವನು
ನಿದ್ರೆಯಲಿ ತಾನು
ಹಲವಷ್ಟು ಹೇಳಲಿದೆ

ಅವನ ಬಳಿಯಲ್ಲಿ
ಕಾದು ಕುಳಿತಿದ್ದಷ್ಟೆ
ಕತ್ತಲಲಿ ಲಾಭ
ಬೆಳಗಾಯ್ತು ಕರೆ ಬಂತು
ಅತ್ತೆ ಕಡೆಯಿಂದ
ಎಚ್ಚರಿಲ್ಲವು ಇನಿಯ
ಮಲಗೆ ಮುದದಿಂದ
ಮತ್ತೆ ಮೂರುದಿನಕೆ
ಇಂಥದೇ ರಾತ್ರಿ
ಅದೂ ಜರುಗುವುದು ಇಂತೆ
ಅದುವೆ ಖಾತ್ರಿ
ಸದಾ ಸಾಗಿದೆ ಹೀಗೆ
ಬಾಳಯಾತ್ರೆ
ಹೀರಾಯ್ತು ಬಿರಿದುಂಬಿ
ನಿನ್ನ ಮಧುಪಾತ್ರೆ
ಹೆಣ್ಣ ಬಯಸಲು ನಿನಗೆ
ಅತ್ತೆಯಾ ನೆನಪು
ಗಂಡ ಬಯಸಲು ನಿನಗೆ
ಗಂಡನಾ ನೆನಪು
ಮಕ್ಕಳೇ ಬೇಡೆಂದು
ಬೇಡಿದೆ ನೀನು
ಒಲಿದ ದೈವವು ನಿನಗೆ
ಕೊಡಲಿಲ್ಲ ಏನೂ
ಇಂದದೇ ಮಂಚದಲ್ಲಿ
ನಿನ್ನ ಗಂಡ
ಅಪ್ಪಿ ಮಲಗಿಹನವಳ
ನೀನು ದಂಡ.

ಕನ್ನಡಿ

ಚಪ್ಪರದ
ಲಕಲಕ ಬೆಳಕಲ್ಲಿ
ವಧು
ತನ್ನ ಪ್ರತಿಬಿಂಬ ಹುಡುಕಿದಾಗ
ಕಂಡಿತಲ್ಲಿ
ಒಂದು ಪ್ರೇತ.

ಹತಾಶೆ

ಬಾಲ್ಯದಿಂದಲೂ
ನನ್ನೆದೆಯ ಗೂಡಲ್ಲಿ
ಬಚ್ಚಿಟ್ಟು ಬೆಳೆಸಿದ್ದ
ಬಿಳಿಪಾರಿವಾಳವೊಂದು
ಬಲಿತು
ಚೂಪು ಕೊಕ್ಕನು ಚಾಚಿ
ಕಾಲ ರೆಕ್ಕೆಗಳ ಮೀಟಿ
ಒಡಲ ಭೇದಿಸಿ
ನನ್ನೆದುರೇ
ಹಾರಿಹೋದುದ ಕಂಡು
ಬಿಕ್ಕಿ ಬಿಕ್ಕಿ
ಅತ್ತೆ.

ಪತಿತೆಯ ಪ್ರಲಾಪ

ನಡು
ಹರಯದ ನನ್ನ
ದಡ
ಸೇರಿಸುವ ಮುನ್ನ
ನಡು
ನೀರಿನಲ್ಲಿ ಕೈಬಿಟ್ಟ ನನ್ನ ಪತಿ
ಅಪಘಾತಕ್ಕೀಡಾಗಿ
ಆಯಿತವನ ತಿಥಿ
ನನಗಾಗಿ
ಅವನುಳಿಸಿದ್ದೇನು ?
ಆರು
ವರ್ಷದ ಆರೆಪಗಾರ
ಆರೆ
ಬರೆ ಕಟ್ಟಿದ ಕೊರೆ ಕುರೀರ
ಜೊತೆಗೆ
ಹದಿ
ಹರಯದ ನಾಲ್ಕು ಹೆಣ್ಣು
ಹದ
ಇರದೆರಡು ಗಂಡೆಂಬ ಕಣ್ಣು
ಹೀಗೆ
ಆರು ಮಕ್ಕಳ ಸಂಸಾರ
ಆರದ
ಹರೆಯದ ಮೈಭಾರ
ಇದೇ

ನನಗಾಗುಳಿದ ಆಧಾರ
ಮುಂದೆ
ತಳಮಳಸಿ ತಾಟಾಡಿ
ಅವ
ರಿವರ ಕೂಡಿ
ಕಾಡು
ವೀ ಜೀವನವ ದೂಡಿದೆನು ಬೇಡಿ
ಆದರೂ
ಬರ
ಲಿಲ್ಲ ಬಾಳಲ್ಲಿ ಹರುಷ
ಕಳೆ
ದು ಹೋದವು ಆರುವರುಷ
ಈಗ
ಏನೂ ಆ
ಸರೆ ಇರದ ಬಾಳು
ಮೈ
ತೂಗುತ್ತಾ ಬೆಳೆದ ಮಕ್ಕಳು
ಕಿತ್ತು
ತಿನ್ನುವ boyಗಳು
ಹೀಗಾಗಿ
ಹೇಸದೆ ಹಾ
ದರಕೆ ಹಾಸಿದೆನು
myಯು.

ಕೌತುಕ

ಯುಗ ಯುಗಾಂತರಗಳು
ಉರುಳಿ
ಜಾರಿದರೂ
ನಿನ್ನ ದೇಹದ
ಕಣಕಣವೂ
ನಗ್ನವಾಗಿ
ಅನಾವರಣಗೊಂಡಿದ್ದರೂ
ನೋಡುವ
ಆಸೆ ಬತ್ತಿಲ್ಲ
ಕೂಡುವ
ಬಯಕೆ ಹಿಂಗಿಲ್ಲ
ರಾಜ ಋಷಿ ದೇವತೆಗಳೂ
ಹೊರತಾಗಲಿಲ್ಲ
ಇನ್ನೆಂಥ ಒಡಲಸಿರಿ
ನಿನ್ನದು !

ಚಿತ್ರಾಂಗದೆಯ ಸ್ವಗತ

ಹೆಣ್ಣು ರೂಪದ ಗಂಡಾಗಿ
ಕತ್ತಲಲ್ಲಿ ಕಂಡ ಸತ್ಯಕ್ಕೆ
ಹಗಲಲ್ಲಿ ಕಣ್ಣಾಗಿ
ಕಣ್ಣ ಕೆಳಗೆ ಗೊತ್ತಿರದ
ಅಪರಿಚಿತ ಲೋಕಕ್ಕೆ ಬಂದೆ
ಮೊದಲ ನೋಟದಲ್ಲೆ ಬಿಟ್ಟಹೂಗಳು
ನನ್ನೆದೆಯ ಜಗ್ಗಿಸಿ
ಒದ್ದೆಮಾಡಿ
ವಾತಾಪಿಗರ್ಭದಲ್ಲಿರಿಸಿ
ಚಿಗಿತ ಹೆಣ್ತನವ
ನಿರ್ದಯೆಯಿಂದ ನಡೆದೆ ಒದ್ದು
ಕರುವಿಟ್ಟ ಚಿತ್ತದ ಮೊಳಕೆ
ಬಾಗಿದ ಲಜ್ಜೆಯ ಲಹರಿ
ಹೆಡೆ ಬಿಚ್ಚಿದ ಬಯಕೆಗಳು
ಯಜ್ಞ ಕುಂಡದಲ್ಲಿ ಬಿದ್ದು
ಕಾದ ಕೆಂಪಗಿನ ಮಾಂಸಲ ಮುದ್ದೆಗೆ
ಮೆತ್ತಗಿನ ಹಾಸಿಗೆ ಒತ್ತಲು
ಮಗ್ಗಲು ಬದಲಿಸಿ ಬದಲಿಸಿ
ಮನ್ಮಥಗೆ ಶರಣಾದೆ
ಅವ ಕೊಟ್ಟ ಬುತ್ತಿಯ ಮೆತ್ತಿ
ಮರು ಹುಟ್ಟು ಪಡೆದೆ
ಐಂದ್ರಜಾಲಿಕ ರತಿಬಲೆಗೆ
ಮಾತಿನ ಸೇತುವೆ ಕಟ್ಟಿದೆ
ವಿಫಲಳಾಗಿ

ವೈಥುನದ ದಾಂಬರು ಬಳಿದೆ
ಮುತ್ತಿನ ಗುಂಗಿನಲಿ
ಗೆದ್ದ ಭ್ರಮಣ ಸಂಭ್ರಮದಲ್ಲಿ
ವಂಶದ ಘನತೆಗೆ ಸಾರಣೆಯು ಮಾಡಿದೆ
ಚುಕ್ಕಿ ಮೂಡುವ ಮೊದಲೆ
ಕತ್ತಲಲಿ ಕರಗಿದ ನಿನ್ನ ಕೋಲ್ಮಿಂಚಿನ
ಬಣ್ಣವ ನಾನರಿಯದೆ ಹೋದೆ
ನೀನು ಅಹಂಕಾರಿ ಮಾತ್ರವೆ ಆಗಿದ್ದಿ
ಹೆಣ್ಣು ನಿನ್ನ ಅಹಂಕಾರಕ್ಕಿಟ್ಟ ಆಭರಣವಾಗಿತ್ತು
ನಾನು ಮನಸ್ಸು ಮಾಡಿದ್ದರೆ
ನಿನ್ನ ದಶನಾಮಗಳಿಗೂ ಮಸಿ ಬಳಿಯ ಬಹುದಿತ್ತು
ಆದರೆಲ್ಲೋ
ನೀನಿತ್ತ ಮಾಗದ ಹಸಿಬಿಸಿ ಮಿಡುಕಾಟ
ಒಡಲಲ್ಲಿ ಬಿಟ್ಟಕುಡಿ
ಕುಡಿವರಿಯಲೆಂದು
ನಿಂತೆ ನೋಡು
ನಾನಿಲ್ಲೆ !
ನಿಂತೆ ಇರುವೆ ಇನ್ನೂ !

ಮಾರನಿಗೆ ಎಚ್ಚರಿಕೆ

ನೆನಪಿನಂಗಳದಲ್ಲಿ
ಅರಳಿದ ಮಲ್ಲಿಗೆ ನೀನು
ಮಾರ ಹೊರಡುವೆಯೇನು
ಪೇಟೆಯೆಡೆಗೆ
ಬೇಡಿಕೆ ಬಹಳುಂಟು
ಬೇಡಿ ಪಡೆವವರುಂಟು
ಎಚ್ಚರಿಕೆ
ಕೈಜಾರಿದರೆ
ಬಾಡುವವು ಬಹುಬೇಗ.

ಹುಡುಕಿ ಕೊಡಿ

ಕಪ್ಪು ಜಗತ್ತಿನಲ್ಲಿ
ಕರಿಜನರ ನಡುವೆ
ನಿದ್ರೆಯಿಲ್ಲದ ಕತ್ತಲನಾವೆಯಲಿ ಕುಳಿತು
ಶೋಧಿಸುತ್ತಿದ್ದೇನೆ ಅವನಿಗಾಗಿ
ಆ ನನ್ನವನಿಗಾಗಿ
ಕಾಲಗರಿಯಲ್ಲೊಂದು ದಿನ
ಕವಿದ ಒಂಟಿತನ ಬಿಗಿದ ನೋವುಗಳಲಿ
ಶಿಥಿಲ ಅಂತರಂಗ ಚೀರಿಟ್ಟಾಗ
ಕಳ್ಳ ಹೆಜ್ಜೆಯನ್ನಿಟ್ಟು ಮೆಲ್ಲಮೆಲ್ಲನೆ ಬಂದು
ಮೈದಡವಿ ಮನಕೆ ಮದ್ದನ್ನಿತ್ತು
ಪ್ರೀತಿಸಲು ಕಲಿಸಿದ್ದ ಆ ನನ್ನ ಸಂಗಾತಿ
ಬಂದಷ್ಟೇ ವೇಗದಲಿ ಹಿಂತಿರುಗಿದ್ದು
ಹಳೆಯ ಕಥೆ
ಶಿಲ್ಪವಿಲ್ಲದ ಕನಸುಗಳಿಗೆ
ನೆನಕೆಯು ತಳಪಾಯುವಾಗಿ
ಕತ್ತಲೆಗೆ ಬೆಳಕಿತ್ತು
ನಕ್ಷತ್ರಗಳ ಎಣಿಸಿ
ಬೆಳಕಿಗೆ ಮಂಜಿನ ಗೋಡೆಕಟ್ಟಿ
ಬೆಳೆಯು ಬೀಜವ ಬಿತ್ತಿ
ನಿಃಶಬ್ದದಲಿ ಕರಗಿ ಹೋದ
ಅವನಿಗಾಗಿ
ಉರುಳ ಬದುಕಲಿ ಜೀವನಿಧಿಯಾಗಿ
ಒಂದು ನೋಟ ಒಂದು ಮಾತು
ಒಂದೇ ಹೆಜ್ಜೆ ಸಪ್ಪಳದಲ್ಲಿ

ನನ್ನನಾವರಿಸಿ
ಆತ್ತ ಕಣ್ಣೀರ ಉಪ್ಪು ರುಚಿಯಲ್ಲಿ
ಸುಖದ ಕ್ಷಣಗಳ ತೂರಿ
ಮುತ್ತನಿತ್ತವನಿಗಾಗಿ
ಬದುಕ ಸ್ಥಿತ್ಯಂತರದಲ್ಲೆಲ್ಲೋ
ಕೊಂಡಿ ಕಳಚಿ
ನನ್ನೊಳಗೆ ನಾನಿಲ್ಲದಾಗುವ ಮುನ್ನ
ಹುಡುಕುತ್ತಿದ್ದೇನೆ ಅವನ
ಮತ್ತೆ ಬೆಳೆಯಲು
ಬೆಳೆದು ಎತ್ತರಕ್ಕೇರಲು
ಭ್ರೂಣ ಕಟ್ಟಲು
ಕಾಲಚಕ್ರದ ತಿರುಗಣೆಯಲೆಲ್ಲೋ
ಯಂತ್ರ ಲೋಕದ ಸದ್ದುಗದ್ದಲದಲ್ಲೋ
ಯೌವನ ಮುಪ್ಪುಗಳ
ಹಪಹಪಿಕೆಯಲ್ಲೋ
ಕಳೆದು ಹೋಗಿದ್ದಾನೆ ಕಳಚಿಕೊಂಡಿದ್ದಾನೆ
ನಾನು ಕನವರಿಸಿ
ನೆತ್ತರು ಕಾರಿಕೊಳ್ಳುವ ಮೊದಲು
ಹುಡುಕಿಕೊಡಿ
ಉಪಕರಿಸಿ.

ವೃದ್ಧಾಪ್ಯದಲ್ಲಿ

ಈಗ
ಹಲ್ಲಿಲ್ಲದ
ನಖ ಮುರಿದ
ವಿಷ ಕಳೆದು ಮುಪ್ಪಾದ
ಮುದಿ ಪತಿವ್ರತೆಯಂತಿರುವ
ಈ ಮಂದಿ
ಒಂದು ಕಾಲಕ್ಕೆ
ಕಚ್ಚುವ
ಚುಚ್ಚುವ
ಮೋಜಿನಲ್ಲಿ ಮೈಮರೆತ
ಶುದ್ಧ ಹಾದರಗಿತ್ತಿಯರು.

ವಾಸ್ತವ

ಬೆಳದಿಂಗಳ ಶೀತಲಸ್ಪರ್ಶದಲ್ಲಿ
ಮೈಮನ ಕಾಯಿಸಿಕೊಳ್ಳುವ
ಕನಸಕಾಲವಿದಲ್ಲ ಗೆಳೆಯ
ಇದು ವಾಸ್ತವಲೋಕ
ಇಲ್ಲಿ ನದಿಗಳು ಹರಿಯುತ್ತವೆ
ಝರಿಗಳು ನಿನದಿಸುತ್ತವೆ
ಮೊಗ್ಗುಗಳು ಮುದುಡುತ್ತವೆ
ಹೂವುಗಳು ಬಾಡುತ್ತವೆ
ನಕ್ಷತ್ರಗಳು ಮಿನುಗುತ್ತವೆ
ಬೆಂಕಿ ಕಾರುತ್ತವೆ
ಹೆಣಗಳು ಕುಣಿಯುತ್ತವ
ಹಣ್ಣೆಲೆಗಳು ನಗುತ್ತವೆ
ಮಿಗಮಿಗಗಳ ಮಸೆದಾಟ
ಮೀನು ಮೊಸಳೆಗಳ ಸುರತಕ್ರೀಡೆ
ಮಳೆಗಾಳಿ ಚಳಿಬಿಸಿಲು
ಹೇಮಂತ
ವಸಂತ
ಎಲ್ಲವೂ ತಿರುಗುಮುರುಗು
ಇಂಥ ಸಂಕ್ರಮಣ ಸ್ಥಿತಿಯಲ್ಲಿ
ಮುಳ್ಳು ಬೇಲಿಗಳಲ್ಲಿ
ಹಸಿರು ಹಳು ಪಾಚಿಗಳಲ್ಲಿ
ಹಾಯುಬೇಕಾಗುತ್ತದೆ
ದೂರದ ಬೆಟ್ಟ ನುಣ್ಣಗೆ
ತೆಪ್ಪಗಿರುವುದೇ ಲೇಸು

ಹಕ್ಕಿಯ ಹರಯ / ಅರವತ್ತಮೂರು

ಹತ್ತಿರ ಹೋದರೆ ಬಿಸಿಲ್ಗುದುರೆ
ವ್ಯರ್ಥ ಪ್ರಯತ್ನ
ವೃಥಾ ಆಯಾಸ
ದಕ್ಕಿದಷ್ಟು ದೋಚಿ ಜೇಬಿಗಿಡಬೇಕು
ಸದ್ದಿಲ್ಲದೆ
ಎಷ್ಟಾದರೂ ನಾವು ಕರ್ಮ ಸಿದ್ಧಾಂತಿಗಳಲ್ಲವೆ ?
ಫಲಾಫಲ ಯಾರಪ್ಪನ ಗಂಟು ?

ಒಂಟಿದನಿ

ಜಗದ ಜಗುಲಿಯಲಿ
ದೃಷ್ಟಿಗೆ ಎಟುಕಿದ
ಬೋಳು ಒಂಟಿ ಮರವೊಂದು
ನನ್ನೆದೆಯ ನಿರ್ವಾಣಕ್ಕೆ ದನಿ ನೀಡಿತ್ತು
ಕಡಿದ ಕೊಂಬೆಗಳು
ಅಳಿದುಳಿದ ಬಣ್ಣಗೆಟ್ಟ ಎಲೆಗಳು
ಗತಕಾಲವ ಮೆಲುಕು ಹಾಕುತ್ತಿದ್ದವು
ಅಂದು
ತನಿವಣ್ಣುಗಳ ತಿಂದು ತೇಗಿದವರೆಷ್ಟು
ಕಾದ ಕಾಯಕಕ್ಕೆ ಅರ್ಥ ಕಂಡವರೆಷ್ಟು
ಮಳೆ ಬಿಸಿಲಿಗೆ ನೆರವು ಪಡೆದವರೆಷ್ಟು
ಒಡಲ ಕಿಚ್ಚಿನಲಿ ಬೆಂಕಿ ಕಾಯ್ದವರೆಷ್ಟು
ಹತ್ತು ಹಲವು ನೆಪಗಳ ಮುಂದು ಮಾಡಿ
ದರೋಡೆ ಮಾಡಿ ದಂಡಿಸಿದವರೆಷ್ಟು
ಇಂದು
ಅವೆಲ್ಲ ಕನವರಿಕೆಯ ಪಳೆಯುಳಿಕೆಗಳು
ಮುರಿದ ಮೌಲ್ಯಗಳ ನೆನಪ ಬಗೆವ
ಈಟಿಯಾಗಿ ಬದುಕಿದ್ದೇನೆ ಬೇಡವಾಗಿ
ಒಂಟಿಯಾಗಿ ನಿಟ್ಟುಸಿರು ಬಿಡುತ್ತಿದ್ದೇನೆ
ದೂರ ಸರಿದ ದುಷ್ಟರಿಗಾಗಿ
ಅಶ್ರುತರ್ಪಣವೀಯುತ್ತಿದ್ದೇನೆ
ಇಂದಲ್ಲ ನಾಳೆ ಸರಿಹೋಗಲೆಂದು
ಅವರ ಹಸನು ಬದುಕಿಗಾಗಿ
ಹಾರೈಸುತ್ತಿದ್ದೇನೆ.

ಹಕ್ಕಿಯ ಹರಯ / ಅರವತ್ತೈದು

ನಗ್ನಸತ್ಯ

ನಾವೆಲ್ಲರು ಅಮೃತಮತಿಯರು
ನೀವೇ ಎಳೆದ ಅನುಲ್ಲಂಘನೀಯ
ಲಕ್ಷ್ಮಣರೇಖೆಯೊಳಗೆ ನಮ್ಮೊಳಗನ್ನು
ಅರಸುತ್ತ ಹೊರಟ ಪತಿತೆಯರು
ಹೆಣ್ತನದ ಗುಂಡಿಗೆಯನ್ನು ಮುಟ್ಟದ
ಅತ್ಯಾಚಾರಕ್ಕೆ ಶತಶತಮಾನಗಳಿಂದ
ಒಳಗಾಗುತ್ತಿರುವ ಅಬಲೆಯರು
ನಮ್ಮ ಹುಬ್ಬಿನ ಕೊಂಕು ಅರಳಿದ ನಗು
ಕನಸುಕಣ್ಗಳು ಮೊಗ ಯೌವನಗಳ ಮೇಲೆ
ನೀವೇ ಕಟ್ಟಿದ ಪರಂಪರೆಯ ಗೋರಿಯೊಳಗೆ
ಉಸಿರುಕಟ್ಟಿ ಸತ್ತವರು
ಬೆಚ್ಚನೆ ಮಕಮಲ್ಲಿನ ಹೊದಿಕೆಯೊಳಗೆ
ಮುಳುಗುತ್ತಲೇ ಬರೀ ಬತ್ತಲಾದವರು
ಹರಿದ ಹೊಕ್ಕುಳಬಳ್ಳಿ ಕಡಿದ ಸಂಬಂಧಗಳ
ಮತ್ತೆ ಮತ್ತೆ ಬೆಸೆದು ಮುಪ್ಪಾದವರು
ಕೊಡುವುದು ಗೊತ್ತಿರದ ಪಡೆವುದಷ್ಟೇ
ರಕ್ತಗತವಾಗಿಸಿದ ಹೃದಯಶೂನ್ಯ
ಗಂಡರಿಗೆ ಹೆಂಡಿರಾದವರು
ಕೇವಲ ಹೆಂಡಿರಾದವರು.

ಅಂತರಂಗ ಬಹಿರಂಗ

ಮಾತು
ಮಲ್ಲಿಗೆಯ ಅರಳು
ನಗೆ
ಮುತ್ತಿನ ಮಿನುಗು
ನಡೆಗೆ
ಆದರ್ಶದ ಮೆರಗು
ಈ
ಸುಶೀಲ ನಡೆಯು
ಮುಸುಕಿನೊಳಗೆ
ಹಾದರದ ಹೊಲಸು
ಮೌನ ಮುದ್ರೆಯು
ಮೋಡಿಯೊಳಗೆ
ಮೋಜಿನ ಕನಸು
ಇಬ್ಬಂದಿತನಕ್ಕಿದುವೆ
ಕನ್ನಡಿಯು ಸೊಗಸು.

ನನ್ನ ಪೋರ

ಎಂಥ ತುಂಟ ಈ ಪೋರ
ನನ್ನ ಮುದ್ದು ಕುಮಾರ
ಕೊರಳ ಕಚ್ಚುವ
ಹೆರಳ ಬಿಚ್ಚುವ
ತುಟಿಯ ಸವರುವ
ಕಟಿಯನಪ್ಪುವ
ಸರಸವಾಡುವ
ಕೊರಳ ದನಿಗೆ
ಕರಗಿ ಹೋಗುವ
ಎಂಥ ತುಂಟ ಈ ಪೋರ
ನನ್ನ ಮುದ್ದು ಕುಮಾರ
ಹರುಷ ಉಕ್ಕುವ
ತೆರದಿ ಹರಟುವ
ಮುದ್ದು ಮಾತಲಿ
ಮೋಡಿ ಮಾಡುವ
ಹೊರಗೆ ಬಿಡದೆ
ಸೆರೆಯ ಹಾಕುವ
ಪರರೊಡನೆ ಮಾತಾಡೆ
ಭರದಿ ಮುನಿಯುವ
ಎಂಥ ತುಂಟ ಈ ಪೋರ
ನನ್ನ ಮುದ್ದುಕುಮಾರ
ಅವನ ಮಾಟಕೆ
ಅವನ ನೋಟಕೆ
ಅವನ ಆಟಕೆ

ಕೊನೆಗವನ ಕಾಟಕೆ
ತೆರದ ಬಾಗಿಲು
ನನ್ನ ಹೃದಯು
ಸವಿಯುವುದು
ಅವನೆಲ್ಲ
ತುಂಟಾಟದ ಸೊದೆಯು.

ಯಾಕೆ ? ಯಾಕೆ ?

ಭರವಸೆಗಳು
ಹುಸಿಯಾಗುತ್ತವೆ ಯಾಕೆ ?
ಮೌಲ್ಯಗಳು ತಾವೆ
ಕುಸಿಯುತ್ತವೆ ಯಾಕೆ ?
ಸಂಬಂಧಗಳು
ಸಾಯುತ್ತವೆ ಯಾಕೆ ?
ಸಂಬಂಧ ಸತ್ತರೂ
ನೆನಪುಗಳು
ಸಾಯುವುದಿಲ್ಲ ಯಾಕೆ ?
ನಾವೇ ರೂಪಿಸಿದ
ವ್ಯವಸ್ಥೆಯ ಸೂತ್ರದಲ್ಲಿ
ಸಿಲುಕಿ ನರಳುತ್ತೇವೆ ಯಾಕೆ ?
ಇಂಥ ಯಾಕೆ ಯಾಕೆಗಳ
ನಡುವೆ ನರಳಿ ಹೊರಳಿದರೂ
ಚಿಗುರಿ ನಿಲ್ಲುವ ಮನಸು
ಮರುಭೂಮಿಯಲ್ಲೂ
ಉಕ್ಕುವ ಒರತೆ
ಬದುಕಿನ ಜೀವಂತಿಕೆ.

ಪೀಡೆಗಳು

ಕೆಲವರಿರುತ್ತಾರೆ
ನಿಮ್ಮನ್ನು ಏನೂ ಕೇಳರು
ನೀವಾಗಿ ಕೊಟ್ಟರೂ
ಸೌಜನ್ಯದಿಂದ ಸ್ವೀಕರಿಸರು
ಇನ್ನು ಕೆಲವರಿರುತ್ತಾರೆ
ನಿಮ್ಮನ್ನು ಕೇಳದೆ ಇರುವುದೇ ಇಲ್ಲ
ನೀವು ಕೊಡದಿದ್ದರೂ
ಛಲದಿಂದ ಬಿಡುವುದೇ ಇಲ್ಲ
ಬಸ್ಸಿನಲ್ಲೊ ರೈಲಿನಲ್ಲೊ ಕುಳಿತು
ಪೇಪರ್ ಮ್ಯಾಗಝಿನ್ ಬಿಡಿಸಿನೋಡಿ
ಹಲವಾರು ಮುಖಗಳು
ಮುಗಿ ಬೀಳುತ್ತವೆ ಒಟ್ಟಿಗೇ ಕೂಡಿ
ಅವರು ಉರಿಸುವ ಸಿಗರೇಟಿಗೆ
ಅವರ ಮಕ್ಕಳ ಚಾಕಲೇಟಿಗೆ
ಆ ಪತ್ರಿಕೆಗಳಿಗಿಂತ ಎಷ್ಟೋ ಪಟ್ಟು ಬೆಲೆ ಹೆಚ್ಚು
ಆದರೂ
ಹೀಗೆ ಓದುವುದೇ ಅವರ ಹುಚ್ಚು
ಸಿನಿಮಾ ಪತ್ರಿಕೆಯಾದರಂತೂ
ಪೀಡಿಸುವ ಮೊದಲೇ ಓದಲು
ಅವರಿಗೊಂದು ಸೀಟು ಕೊಡಿ
ಆಮೇಲೆ ಅದರ ಯೋಚನೆ ಬಿಡಿ
ಇನ್ನು ಬೀಡಿ ಸಿಗರೇಟಿನ ಗುಣ
ವಿನಿಮಯದ ಸಾರ್ವತ್ರೀಕರಣ
ಇಲ್ಲದ್ದನ್ನು ಕೇಳಿ ಪಡೆದು

ಇರುವುದನ್ನು ಕೊಟ್ಟು
ಕೊಳಕು ಬಾಯಲ್ಲಿ ಅವುಗಳನ್ನಿಟ್ಟು ಸುಟ್ಟು
ಹೊಗೆ ಉಗುಳುವುದೇ ಪಟ್ಟು
ಊಟವನ್ನಾದರೂ ಬಿಟ್ಟಾರು
ಬೀಡಿ ಸಿಗರೇಟನ್ನೆಂದೂ ಬಿಡರು
ನಾಜೂಕು ನಡೆಯ ನಾರಿ
ಅವಳದ್ದೇ ಇನ್ನೊಂದು ಪರಿ
ಮೆಲುನಗೆಯ ಬೀರುತ್ತಾ ಬರುವಳು
ಹಲವು ಹತ್ತು ಮಾತಾಡುವಳು
ಚಂದದಲಿ ಸುತ್ತೆಲ್ಲಾ ನೋಡಿ
ಮರುಳು ಮಾತುಗಳ ಸೂಡಿ
ಪಿಸುಮಾತಿನಲಿ ಕೇಳ್ತಾಳೆ ಬೇಡಿ
ಸ್ವಲ್ಪ ಸಕ್ಕರೆ ಇದ್ದರೆ ಕೊಡಿ
ನಿಮ್ಮ ಯಜಮಾನರಿಗೆ
ಸಂಬಳವಂತೆ ತಿಂಗಳ ಕೊನೆಗೆ
ನಮ್ಮವರಿಗೆ ಎಂದೂ ಬರುವುದಿಲ್ಲ
ಮೊದಲ ವಾರದ ಒಳಗೆ
ಏನೋ ನೀವಿರುವುದರಿಂದ
ಸರಿಹೋಯ್ತು ನರೆಗೆ
ಒಂದ್ಹತ್ತು ಇಪ್ಪತ್ತು ಕೊಟ್ಟರಾಯ್ತು
ತಿಂಗಳ ಕೊನೆಗೆ
ಇಂಥ ಹತ್ತಾರು ಪೀಡೆಗಳ ನಡುವೆ
ಸಾಗುವ ಜೀವನ
ಇದ ಭರಿಸಲಾಗದೆ
ಬರೆದದ್ದೇ ಈ ಕವನ.

ಮೊದಲ ಸಾಲುಗಳು



ಈ ಶತಮಾನದ ಎಂಬತ್ತರ ದಶಕ ಕನ್ನಡದಲ್ಲಿ ಕವಯಿತ್ರಿಯರ ದಶಕ. ಮಧ್ಯಮ ವರ್ಗದ ಕೌಟುಂಬಿಕ ಜೀವನದ ಕಿರು ಕಥಾ ಪ್ರಸಂಗಗಳಲ್ಲಿಯೇ ಮಗ್ನಳಾಗಿದ್ದ ಮಹಿಳೆ ಕಾವ್ಯದ ಕಡೆಗೆ ಮುಖಮಾಡಿ ಅಂತರಂಗ ಶೋಧನೆಯಲ್ಲಿ ತೊಡಗಿದ್ದು ಈ ದಶಕದ ದೊಡ್ಡ ಸಾಧನೆ. ತಮ್ಮ ಸಮರ್ಥವಾದ ಕಾವ್ಯದಿಂದ ಅನೇಕ ಮಹಿಳೆಯರು ಕನ್ನಡ ಕಾವ್ಯ ದಿಗಂತಗಳನ್ನು ವಿಸ್ತರಿಸಿದ್ದಾರೆ; ತಮ್ಮ ವ್ಯಕ್ತಿತ್ವವನ್ನು ಪ್ರಕಟಿಸಿದ್ದಾರೆ. ಈ ದಿಕ್ಕಿನಲ್ಲಿ ಡಾ. (ಶ್ರೀಮತಿ) ವಿದ್ಯಾ ಶೇಖರ್ ಅವರ 'ಹಕ್ಕಿಯ ಹರಯ' ಈಚಿನ ಒಂದು ಉದಾಹರಣೆ.

'ಹಕ್ಕಿಯ ಹರಯ' ಪ್ರಾಯದ ಹೆಣ್ಣಿನ ಸಂಕೇತ ಆಕೆಯ ಬದುಕಿನ ಸ್ಥಿತ್ಯಂತರಗಳನ್ನು ಇಲ್ಲಿನ ಕವಿತೆಗಳು ಸೊಗಸಾಗಿ ಚಿತ್ರಿಸುತ್ತವೆ; ಗಂಡು ಹೆಣ್ಣಿನ ನಡುವಿನ ಸಂಬಂಧದ ಸೂಕ್ಷ್ಮ ಪದರುಗಳನ್ನು ಸಮರ್ಥವಾಗಿ ನಿರೂಪಿಸುತ್ತವೆ; ಆ ಸಂಬಂಧಗಳ ಆಸೆ ನಿರಾಸೆಗಳನ್ನು, ದುಃಖ ದುಮ್ಮಾನಗಳನ್ನು, ತಪ್ಪು ಒಪ್ಪುಗಳನ್ನು ಅಸಹಾಯಕತೆ ಅನಿವಾರ್ಯತೆಗಳನ್ನು ನವಿರಾಗಿ ವರ್ಣಿಸುತ್ತವೆ. ಹೀಗೆ ಮಾಡುವಲ್ಲಿ ಅವು ಕವಯಿತ್ರಿಯೊಬ್ಬಳ ಆತ್ಮಕಥೆಯಾಗುವುದಿಲ್ಲ; ಹೆಣ್ಣಿನ ಅನುಭವ ಸಾಮಾನ್ಯವಾಗುತ್ತದೆ. ಪ್ರಿಯತಮನ ಅಪ್ಪುಗೆಗೆ ಹಂಬಲಿಸುವ, ಕಾತರಿಸುವ ಹಂತದಿಂದ ತೊಡಗಿ ಮುದ್ದು ಕುಮಾರನ ತುಂಟಾಟಗಳಿಗೆ ಸೋಲುವವರೆಗಿನ ಜೀವನದ ನಾನಾ ಸವಿ ಹೆಜ್ಜೆಗಳು ವಿದ್ಯಾ ಅವರ ಕವಿತೆಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಈ ಸಂಕಲನದ ಕವಿತೆಗಳು ಯಾವುದೇ ಪಂಥದ ಬೆನ್ನು ಹಿಡಿದು ಬಂದವಲ್ಲ; ಹೃದಯದ ತುಡಿತಗಳಿಗೆ ಸಹಜವಾಗಿ ಲಭಿಸಿದ ಶಬ್ದರೂಪಗಳು. ಭಾಷೆ ಎನ್ನುವುದು ಒಂದು ಆಟ. ಈ ಆಟವನ್ನು ಯಶಸ್ವಿಯಾಗಿಸುವುದು ಕಾವ್ಯ. ಕಾವ್ಯದ ಗುಣಸ್ತರಗಳೆಲ್ಲ ಈ ಯಶಸ್ಸಿನ ಸ್ತರಗಳನ್ನೇ ಅವಲಂಬಿಸಿರುತ್ತವೆ.

ಬೆಳೆಯುವುದು ಬೇಕಾದಷ್ಟಿದ್ದರೂ, 'ಹಕ್ಕಿಯ ಹರಯ'ದಲ್ಲಿ ವಿದ್ಯಾ ಪಡೆದಿರುವ ಯಶಸ್ಸು ಗಮನಾರ್ಹವಾದದ್ದು.

ಹಾ.ಮಾ.ನಾಯಕ

ದೀಪಾವಳಿ - '89